# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಮಾರ್ಚ್ 06, 2023

ಸಂಪುಟ : 49 ಸಂಚಿಕೆ : 293 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಶೀಘ್ರದಲ್ಲೇ ಪೌರ ಕಾರ್ಮಿಕರಿಗೆ ಮನೆ ಹಸ್ತಾಂತರ : ಸಚಿವ ಭೈರತಿ

ದಾವಣಗೆರೆ, ಮಾ.5- ಪೌರ ಕಾರ್ಮಿಕರ ಕಲ್ಯಾಣ ಮತ್ತು ಜೀವನ ಭದ್ರತೆಗಾಗಿ ರಾಜ್ಯ ಸರ್ಕಾರ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದು ನಗರಾಭಿವೃದ್ಧಿ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ಭಾನುವಾರ ಪಾಲಿಕೆ ವ್ಯಾಪ್ತಿಯ ದೊಡ್ಡಬೂದಿಹಾಳ ಗ್ರಾಮದಲ್ಲಿ ಪೌರ ಕಾರ್ಮಿಕರ ಮನೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೌರ ಕಾರ್ಮಿಕರ ಆರೋಗ್ಯ ಮತ್ತು ಜೀವನ ಸುಧಾರಣೆಗೆ ಸರ್ಕಾರ ಮೊದಲ ಆದ್ಯತೆ ನೀಡಿದೆ. 9 ಎಕರೆ 20 ಗುಂಟೆ ಜಾಗದಲ್ಲಿ 51 ಕೋಟಿ ರೂ. ವೆಚ್ಚದಲ್ಲಿ ಜಿ+1 ಮಾದರಿಯ 381 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಪ್ರತಿ ಬ್ಲಾಕ್‌ನಲ್ಲಿ ನೆಲ ಹಾಗೂ ಮೊದಲ ಮಹಡಿ ಸೇರಿ ಒಟ್ಟು 4 ಮನೆಗಳಿದ್ದು, ಪ್ರತಿ ಮನೆಗೆ 13.40 ಲಕ್ಷ ರೂ. ನಿರ್ಮಾಣ ವೆಚ್ಚ ತಗುಲಿದೆ. ಪಾರದರ್ಶಕವಾಗಿ ಶೀಘ್ರವೇ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದು ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಗರದ ಕುಂದುವಾಡದ ಬಳಿ ಖಾಸಗಿ ಲೇಔಟ್‌ನ ಸಿ.ಎ ನಿವೇಶನದಲ್ಲಿ 3.93 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ತಲಾ 50 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಉದ್ಯೋಗಸ್ಥ ಮಹಿಳಾ ನಿಲಯ ಮತ್ತು ರೂ.5.82 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಮಿನಿ ವಿಧಾನಸೌಧ ಕಟ್ಟಡಗಳನ್ನು ಉದ್ಘಾಟಿಸಿದರು.


ನಂತರ ಸಚಿವರು ಸ್ಮಾರ್ಟ್ ಸಿಟಿ ಯೋಜನೆಯಡಿ 26.42 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನವೀಕೃತ ಖಾಸಗಿ ಬಸ್ ನಿಲ್ದಾಣ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಡಾ.ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ.ರಾಮಚಂದ್ರ, (2ನೇ ಪುಟಕ್ಕೆ)

### ತರಾತುರಿಯಲ್ಲಿ ನಡೆದ ಕಾಮಗಾರಿ ಉದ್ಘಾಟನೆ

**ವಿವಿಧ ಕಾಮಗಾರಿಗಳ ಉದ್ಘಾಟನೆಗೆ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಸೌಲಭ್ಯ ಪಡೆದ ಫಲಾನುಭವಿಗಳ ಸಮ್ಮೇಳನದಲ್ಲಿ ಭಾಗವಹಿಸುವ ಅವಸರದಲ್ಲಿಯೇ ಗೃಹ ಭಾಗ್ಯ ಯೋಜನೆಯಡಿ ಪೌರ ಕಾರ್ಮಿಕರಿಗೆ ನಿರ್ಮಿಸಿರುವ ಮನೆಗಳನ್ನು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ನಂತರ ಆಯೋಜಿಸಲಾಗಿದ್ದ ವೇದಿಕೆ ಕಾರ್ಯಕ್ರಮದ ಮೇಲ್ಭಾಗಕ್ಕೂ ಹೋಗದೆ ಕೆಳಗೆ ನಿಂತು ಸಮಾರಂಭದ ವೇದಿಕೆ ಉದ್ಘಾಟನೆ ನೆರವೇರಿಸಿದರು.**

**ಬಳಿಕ ನವೀಕೃತ ಖಾಸಗಿ ಬಸ್ ನಿಲ್ದಾಣ ಲೋಕಾರ್ಪಣೆಗೊಳಿಸಿ, ಅಲ್ಲಿಂದ ಮಿನಿ ವಿಧಾನ ಸೌಧ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕುಂದುವಾಡದ ಬಳಿ ನಿರ್ಮಿಸಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಮತ್ತು ಉದ್ಯೋಗಸ್ಥ ಮಹಿಳಾ ನಿಲಯದ ಕಟ್ಟಡಗಳನ್ನು ಉದ್ಘಾಟಿಸಿದರು.**



ದಾವಣಗೆರೆಯಲ್ಲಿ ನವೀಕೃತಗೊಂಡ ಖಾಸಗಿ ಬಸ್ ನಿಲ್ದಾಣವನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

# ಕಾಂಗ್ರೆಸ್‌ನಿಂದ ಸುಳ್ಳಿನ 'ಗ್ಯಾರಂಟಿ'

## ಬಿಜೆಪಿಯಿಂದ ಸಶಕ್ತೀಕರಣದ ರಾಜಕೀಯ : ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ



ದಾವಣಗೆರೆ, ಮಾ. 5 – ಕಾಂಗ್ರೆಸ್ ಪಕ್ಷ ಈಡೇರಿಸಲು ಸಾಧ್ಯವಾಗದ 'ಗ್ಯಾರಂಟಿ' ನೀಡುತ್ತಾ ಸುಳ್ಳು ರಾಜಕಾರಣ ಮಾಡುತ್ತಿದೆ. ಬಿಜೆಪಿ ಜನರ ಸಶಕ್ತೀಕರಣದ ರಾಜಕೀಯ ಮಾಡುತ್ತಿದೆ ಎಂದು ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕೇಂದ್ರ ಮತ್ತು ರಾಜ್ಯಗಳ ವಿವಿಧ ಯೋಜನೆಗಳ ಫಲಾನುಭವಿಗಳ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಆಡಳಿತದ ಛತ್ತೀಸ್‌ಘಡದಲ್ಲಿ ರಾಹುಲ್ ಗಾಂಧಿ ತಿಳಿಸಿದ ನಿರುದ್ಯೋಗಿ ಭತ್ಯೆಯ ಗ್ಯಾರಂಟಿ ಜಾರಿಗೆ ಬಂದಿಲ್ಲ. ರಾಜಸ್ಥಾನದಲ್ಲಿ ಸಾಲ ಮನ್ನಾದ ಗ್ಯಾರಂಟಿ ಈಡೇರಿಲ್ಲ. ತಮ್ಮ ಆಡಳಿತಾವಧಿಯಲ್ಲಿ ದೇಶಕ್ಕೆ ಅಗತ್ಯವಾದ ಪ್ರಮಾಣದ ವಿದ್ಯುತ್ ಉತ್ಪಾದಿಸಲಿಲ್ಲ. ವಿದ್ಯುತ್ ಉತ್ಪಾದಿಸಲು ಆಗದವರು, ಈಗ ಉಚಿತ ವಿದ್ಯುತ್ ಗ್ಯಾರಂಟಿ ನೀಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಮತ್ತೊಂದೆಡೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರತಿ ಮನೆಗೂ ನಲ್ಲಿ, ಹೊಗೆ ಮುಕ್ತ ಅಡುಗೆ ಮನೆಗಾಗಿ ಉಜ್ವಲ ಸಿಲಿಂಡರ್ ಯೋಜನೆ, ವಿದ್ಯುತ್ ಹೊರೆ ಕಡಿಮೆ ಮಾಡುವ ಉಜಾಲ, ಬ್ಯಾಂಕ್ ಖಾತೆಗಳಿಗೆ ನೇರ ನೆರವು ಜಮಾ ಯೋಜನೆಗಳ ಮೂಲಕ ಜನರನ್ನು ಸಶಕ್ತೀರಣಗೊಳಿಸುತ್ತಿದ್ದಾರೆ ಎಂದರು.

ಮುಂದಿನ ಚುನಾವಣೆಯಲ್ಲಿ ಗ್ಯಾರಂಟಿ ಅನ್ನುವವರು ಮನೆಗೆ ಹೋಗಲಿದ್ದಾರೆ. ಮೋದಿ ನೇತೃತ್ವದ ಡಬಲ್ ಇಂಜಿನ್ ಸರ್ಕಾರದಲ್ಲಿ ಪರಿವರ್ತನೆ ಆಗಲಿದೆ ಎಂದು ಜೋಷಿ ಭವಿಷ್ಯ ನುಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಮಾತನಾಡಿ, ಬಿಜೆಪಿಯು ಜನಪರ ಹಾಗೂ ಬಡವರ ಪರವಾದ ಸರ್ಕಾರ ನೀಡುತ್ತಿದೆ. ರಾಜ್ಯದ ಹೃದಯ ಭಾಗದಲ್ಲಿರುವ ದಾವಣಗೆರೆಯಲ್ಲಿ ಮುಂದಿನ ದಿನಗಳಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯಾಗಲಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಮುಂದಿನ ಎರಡು ತಿಂಗಳಲ್ಲಿ ಜನರ ಮನೆ ಬಾಗಿಲಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸಲಾಗುವುದು. ಜನರು ಮುಂದಿನ ಚುನಾವಣೆಯಲ್ಲಿ ಆಶೀರ್ವಾದ ಮಾಡಿ ಅವಕಾಶ ಕೊಡಬೇಕೆಂದು ಕರೆ ನೀಡಿದರು.

### ಶಾಸಕ ಮಾಡಾಳ್ ವಿರುದ್ಧ ಮತ್ತಷ್ಟು ಕ್ರಮ : ಜೋಷಿ

**ದಾವಣಗೆರೆ, ಮಾ. 5 - ಲೋಕಾಯುಕ್ತ ಲಂಚ ಪ್ರಕರಣದಲ್ಲಿ ಸಿಲುಕಿರುವ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧ ಅಗತ್ಯವಾದಲ್ಲಿ ಮತ್ತಷ್ಟು ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ.**

**ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಪ್ಪು ಮಾಡಿದವರಿಗೆ ಪಾಠ ಆಗಬೇಕು, ಕಾನೂನು ರೀತಿಯ ಕ್ರಮ ಆಗಬೇಕು. ಪಕ್ಷದ ಸೂಚನೆಯಂತೆ ವಿರೂಪಾಕ್ಷಪ್ಪ ರಾಜೀನಾಮೆ ನೀಡಿದ್ದಾರೆ. ಅಗತ್ಯವಾದರೆ ಇನ್ನಷ್ಟು ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಲೋಕಾಯುಕ್ತರ ಕ್ರಮದಿಂದ ಹಿನ್ನಡೆ ಪ್ರಶ್ನೆಯೇ ಇಲ್ಲ. ಲೋಕಾಯುಕ್ತವನ್ನು ಸಂಪೂರ್ಣವಾಗಿ ಬಲಪಡಿಸಿದ್ದೇವೆ. ಲೋಕಾಯುಕ್ತರು ತೆಗೆದುಕೊಳ್ಳುವ ಕ್ರಮವನ್ನು ಪ್ರಶಂಸಿಸಬೇಕಿದೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಹಾಗೂ ಪರಿವಾರವಾದಕ್ಕೆ ಬಿಜೆಪಿ ವಿರುದ್ಧವಾಗಿದೆ ಎಂದರು.**

### ಸಿ.ಎಸ್.ಆರ್. ನಿಧಿ ಆರೋಪ ತಳ್ಳಿ ಹಾಕಿದ ಸಚಿವ ಭೈರತಿ

**ದಾವಣಗೆರೆ, ಮಾ. 5 - ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಸಿ.ಎಸ್.ಆರ್. ನಿಧಿಯ ಬಳಕೆಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಮಾಡಲಾಗಿರುವ ಆರೋಪ ತಳ್ಳಿ ಹಾಕಿರುವ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಸರ್ಕಾರಿ ಶಾಲಾ ಮಕ್ಕಳ ಶಾಲೆಗಳಿಗಾಗಿ ನಿಧಿ ಬಳಸಲಾಗಿದೆ. ಇದೆಲ್ಲದಕ್ಕೂ ಲೆಕ್ಕ ಇದೆ ಎಂದಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಕಂಪನಿಯ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ. ಸರ್ಕಾರದ ನಿಯಮಗಳ ಅನ್ವಯ ಸಿ.ಎಸ್.ಆರ್. ನಿಧಿಯ ಬಳಕೆ ಮಾಡಲಾಗಿದೆ. ಅದರ ಸಂಪೂರ್ಣ ವಿವರ ನೀಡಲಾಗುವುದು ಎಂದರು.**

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಜಗಳೂರಿನ 57 ಕೆರೆ ನೀರು ತುಂಬಿಸುವ, ಮನೆ ಮನೆಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ 482 ಕೋಟಿ ರೂ. ಹಾಗೂ 45 ಸಾವಿರ ಎಕರೆ ಜಮೀನಿಗೆ ನೀರಾವರಿ ಕಲ್ಪಿಸುವ ತ್ರಿವಳಿ ಯೋಜನೆಗಳು ಜಾರಿಯಾಗಿವೆ ಎಂದರು.

ಶಾಸಕ ಪ್ರೊ. ಲಿಂಗಣ್ಣ ಹಾಗೂ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಬಸವರಾಜ ನಾಯ್ಕ ಮಾತನಾಡಿದರು. ಈ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ 119 ಫಲಾನುಭವಿಗಳಿಗೆ ಸಾಂಕೇತಿಕವಾಗಿ ಸೌಲಭ್ಯಗಳನ್ನು ವಿತರಿಸಲಾಯಿತು. ಶಾಸಕ ಎಸ್.ಎ. ರವೀಂದ್ರನಾಥ್ (5ನೇ ಪುಟಕ್ಕೆ)

## ಅಕ್ಷರ ಸಂಸ್ಕೃತಿ, ಸಾಹಿತ್ಯ, ಕಲೆಗಳಿಗೆ ಜಾತಿ ಇಲ್ಲ

**ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್**

ಚನ್ನಗಿರಿ, ಮಾ. 5- ಅಕ್ಷರ ಸಂಸ್ಕೃತಿ, ಸಾಹಿತ್ಯ, ಕಲೆಗಳಿಗೆ ಜಾತಿ ಇಲ್ಲ. ಇವೆಲ್ಲವೂ ಜಾತಿ, ಧರ್ಮಗಳನ್ನು ಮೀರಿ ಬೆಳೆದಿವೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಹೇಳಿದರು.

ಚನ್ನಗಿರಿ ತಾಲ್ಲೂಕು ಹರನಹಳ್ಳಿ-ಕೆಂಗಾಪುರದಲ್ಲಿ ನಡೆದ ದಾವಣಗೆರೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಸೃಜನಶೀಲತೆಯ ಬರಹ ಮತ್ತು ಭಾಷಣ ಇಂದು ಬಹಳ ಮುಖ್ಯವಾಗಿವೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗಳು ಇನ್ನಷ್ಟು ಬಲಿಷ್ಠಗೊಳ್ಳಬೇಕಾಗಿದೆ ಎಂದರು.

ಮಾತಾಡಿದ್ದು ಸಾಕು, ಬರೆದಿದ್ದು ಸಾಕು, ಮಾತು, ಕೃತಿಗಿಂತ ಆಚರಣೆಗೆ ತರುವುದು ಲೇಸು. ತನ್ಮೂಲಕ ಉತ್ತಮ ಬದುಕು ಬದುಕೋಣ ಎಂದು ಎಂದು ಆಶಿಸಿದರು.

ಜಾನಪದ ಕಲಾವಿದ ಯುಗಧರ್ಮ ರಾಮಣ್ಣ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿರುವುದು ನಮಗೆ ಅತ್ಯಂತ ಸಂತೋಷ ಉಂಟುಮಾಡಿದೆ. ಚನ್ನಗಿರಿ ತಾಲ್ಲೂಕಿಗೆ ತನ್ನದೇ ಆದ ವೈಶಿಷ್ಟ್ಯತೆ ಇದೆ. ಇಂತಹ ನಾಡಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷ ಯುಗಧರ್ಮ ರಾಮಣ್ಣ ಮಾತನಾಡಿ, ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅನುಷ್ಠಾನಗೊಳಿಸುವಂತೆ ಆಗ್ರಹಪೂರ್ವಕ ಮನವಿ ಮಾಡಿದರು.

ಹರನಹಳ್ಳಿ-ಕೆಂಗಾಪುರ ಮಠದ ಶ್ರೀ ರಾಮಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಪತ್ರಕರ್ತ ಬಿ.ಎನ್. ಮಲ್ಲೇಶ್, ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಶ್ರೀ ರಾಮಲಿಂಗೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಹೆಚ್. ಆರ್. ವಿಜಯಕುಮಾರ್, ಕಸಾಪ ತಾಲ್ಲೂಕು ಅಧ್ಯಕ್ಷ ಎಲ್.ಜಿ.ಮಧುಕುಮಾರ್, ಡಿ.ಎಂ. ಹಾಲಾರಾಧ್ಯ, ಕೆ.ಎಸ್. (5ನೇ ಪುಟಕ್ಕೆ)

### ಬ್ರಹ್ಮೋಸ್ ಸೂಪರ್ ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ, ಮಾ. 5 – ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆಯನ್ನು ಭಾರತೀಯ ನೌಕಾದಳ ಯಶಸ್ವಿಯಾಗಿ ಪೂರೈಸಿದೆ. ಅರಬ್ಬೀ ಸಮುದ್ರದಲ್ಲಿ ಈ ಪರೀಕ್ಷೆ ನಡೆಸಲಾಗಿತ್ತು. ಡಿ.ಆರ್.ಡಿ.ಒ. ದೇಶೀಯವಾಗಿ ರೂಪಿಸಿದ್ದ ಸೀಕರ್ ಅಂಡ್ ಬೂಸ್ಟರ್ ಅಳವಡಿಕೆ ಮಾಡಿ ಪರೀಕ್ಷೆ ನಡೆಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತ, ರಷ್ಯಾದ ಜಂಟಿ ಉದ್ಯಮವಾದ ಬ್ರಹ್ಮೋಸ್ ಏರೋಸ್ಪೇಸ್ ಕಂಪನಿ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಗಳನ್ನು ಉತ್ಪಾದಿಸಿದೆ. ಇವುಗಳನ್ನು ಸಬ್ ಮರೀನ್, ಹಡಗು, ವಿಮಾನ , ನೆಲದಿಂದ ಸಿಡಿಸಬಹುದು.


## ಹೃದಯಪೂರ್ವಕ ಕೃತಜ್ಞತೆಗಳು



ದಿನಾಂಕ 03.03.2023ರಂದು ನಡೆದ ಹರಿಹರ ತಾ. ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಎಲ್ಲಾ ಮುಖಂಡರಿಗೆ ಮತ್ತು ಸಂಘದ ಎಲ್ಲಾ ನಿರ್ದೇಶಕರಿಗೂ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

**ಕೆ.ಹೆಚ್. ಮಹೇಶ್ ಕೆಂಚನಹಳ್ಳಿ**
ಅಧ್ಯಕ್ಷರು, ಟಿಎಪಿಸಿಎಂಎಸ್, ಹರಿಹರ ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರು.



## ಸುಶೀಲಾ ಹುಲ್ಲತ್ತಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ನಿವಾಸಿ
ನಿವೃತ್ತ ಕೃಷಿ ಸಹಾಯಕ ನಿರ್ದೇಶಕರಾದ
ಎಸ್.ಸಿ. ಹುಲ್ಲತ್ತಿ ಇವರ ಧರ್ಮಪತ್ನಿ
**ಶ್ರೀಮತಿ ಸುಶೀಲ ಹುಲ್ಲತ್ತಿ**
ಇವರು ದಿನಾಂಕ 5-3-2023ರ ಭಾನುವಾರ ಬೆಳಿಗ್ಗೆ 10.45 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 70 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6-3-2023ರ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಎಸ್. ಸಿ. ಹುಲ್ಲತ್ತಿ, ಮಾಜಿ ಅಧ್ಯಕ್ಷರು, ಲಯನ್ಸ್ ಕ್ಲಬ್, ದಾವಣಗೆರೆ.
ಮಕ್ಕಳು : ಶ್ರೀಮತಿ ನಯನ ಮತ್ತು ಶ್ರೀಮತಿ ನಂದಿನಿ
ಅಳಿಯಂದಿರು : ನಟರಾಜ್ ಮತ್ತು ಮೋಹನ್ ಹಾಗೂ ಮೊಮ್ಮಕ್ಕಳು
ಹುಲ್ಲತ್ತಿ ಹಾಗೂ ಉಪ್ಪಿನ್ ಬಂಧುಗಳು ಹಾಗೂ ಬಂಧು-ಮಿತ್ರರು.



ಪ್ಲಾಟಿನಾ 110 ಎಬಿಎಸ್ ಟೆಸ್ಟ್‌ರೈಡ್ ಮಾಡಿ
ಲಕ್ಕಿ ಡ್ರಾನಲ್ಲಿ ಗೆಲ್ಲೀರಿ ಆಕರ್ಷಕ ಉಡುಗೊರೆ ಉಚಿತವಾಗಿ* ಪಡೆಯಿರಿ
(ಮತ್ತು)
ಉಚಿತ* 5 ಪಾಯಿಂಟ್ ತಪಾಸಣೆ ಪಡೆಯಿರಿ
*ಬಿಡಿ ಭಾಗಗಳ ಬದಲಾವಣೆ ಇಲ್ಲ, ಕೇವಲ ಪರಿಶೀಲನೆ / ಮೌಲ್ಯ ಮಾಪನ.
*ಟೆಸ್ಟ್‌ರೈಡ್ ಪೂರ್ಣಗೊಂಡ ನಂತರ 2018 + ಮಾದರಿ ಮಾತ್ರ ಅನ್ವಯಿಸುತ್ತದೆ.

ಎಕ್ಸ್‌ಚೇಂಜ್ ಮತ್ತು ಲೋನ್ ಮೇಳ
ABS ಚಾಲೆಂಜ್ ನಲ್ಲಿ ಭಾಗವಹಿಸಿ
ಪ್ರಸ್ತುತವಿದೆ ಜಗತ್ತಿನ ಅತ್ಯಂತ ಸುರಕ್ಷಿತ ಹೊಸ ಪ್ಲಾಟಿನಾ 110 CC
ABS ಹಾಗೂ Non-ABS ವ್ಯತ್ಯಾಸ ತಿಳಿದುಕೊಳ್ಳಿರಿ
ಅನುಭವಿ ಚಾಲಕರಿಂದ ವ್ಯತ್ಯಾಸಗಳನ್ನು ತಿಳಿಯಿರಿ
ಸ್ವತಃ ಟೆಸ್ಟ್‌ರೈಡ್ ಮಾಡಿ ಹಾಗೂ ವ್ಯತ್ಯಾಸಗಳನ್ನು ತಿಳಿದುಕೊಳ್ಳಿರಿ




ಎಬಿಎಸ್ ಸುರಕ್ಷತೆಯ ಸವಾಲು
ABS ಸುರಕ್ಷೆ ನೀಡುತ್ತದೆ
ತಪ್ಪದ ಬ್ರೇಕಿಂಗ್ ಸಿಸ್ಟಮ್
ಕಡಿಮೆ ಬ್ರೇಕಿಂಗ್ ಅಂತರ
ಉತ್ತಮ ನಿಯಂತ್ರಣ ಮತ್ತು ಸ್ಥಿರತೆ
ಎಕ್ಸ್-ಶೋರೂಮ್ ಬೆಲೆ ₹ 72,736/-*
ಆಕರ್ಷಕ ಡೌನ್‌ಪೇಮೆಂಟ್ ₹ 5,999/-*
* Conditions apply

ಪ್ರಾಯೋಜಕರು : ಜೈನ್ ಬಜಾಜ್
ಶಂಕರ ವಿಹಾರ ಎಕ್ಸ್‌ಟೆಂಷನ್, ಪಿ.ಬಿ. ರಸ್ತೆ, ದಾವಣಗೆರೆ-577006.
ಶಾಖೆ : ಶಿವಕುಮಾರ್ ಸ್ವಾಮಿ ಬಡಾವಣೆ, ಹದಡಿ ರಸ್ತೆ, ದಾವಣಗೆರೆ-577005.
ದಿನಾಂಕ: 6 ಮತ್ತು 7ನೇ ಮಾರ್ಚ್, 2023
ಸ್ಥಳ : ಹೈ ಸ್ಕೂಲ್ ಮೈದಾನ, ಪಿ.ಬಿ. ರಸ್ತೆ, ದಾವಣಗೆರೆ.
ಸಂಪರ್ಕಿಸಿ : 93436 36805 / 96635 66620 80950 55555

# ಗೃಹಿಣಿ ಜವಾಬ್ದಾರಿಯಿಂದ ಕುಟುಂಬವನ್ನು ನಿರ್ವಹಿಸುವ ಮನೆಯಲ್ಲಿ ಸದಾ ಶಾಂತಿ - ಸಂತೋಷ

## ಹೊನ್ನಾಳಿ ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ



ಹೊನ್ನಾಳಿ, ಮಾ.5- ದುಂದು ವೆಚ್ಚವಿಲ್ಲದೆ, ಜಾತಿ, ಮತಗಳ ಭೇದವಿಲ್ಲದೇ ಪವಿತ್ರ ಸ್ಥಳಗಳಲ್ಲಿ ಹಲವಾರು ಮಠಾಧಿಪತಿಗಳ ಸಮ್ಮುಖದಲ್ಲಿ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ವರದಾನವಾಗಿದ್ದು, ಸಾಮೂಹಿಕ ವಿವಾಹ ಕಾರ್ಯಗಳು ಹೆಚ್ಚು ಹೆಚ್ಚಾಗಿ ನಡೆಯುವಂತಾಗಬೇಕು ಎಂದು ಸಿ.ಎಂ. ರಾಜಕೀಯ ಕಾರ್ಯದರ್ಶಿ, ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ ಹಿರೇಕಲ್ಮಠದಲ್ಲಿ ಲಿಂ. ಶ್ರೀ ಮೃತ್ಯುಂಜಯ ಶಿವಾಚಾರ್ಯ ಮಹಾಸ್ವಾಮೀಜಿಗಳ 53ನೇ ವಾರ್ಷಿಕ ಪುಣ್ಯಾರಾಧನೆ, ಲಿಂ. ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿಯವರ 8ನೇ ವಾರ್ಷಿಕ ಸಂಸ್ಮರಣೆ ಹಾಗೂ ಲಿಂ. ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿಯವರ ಪಟ್ಟಾಧಿಕಾರದ 50ನೇ ವರ್ಷದ ಸುವರ್ಣ ಮಹೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ಶ್ರೀಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಆಡಿಟೋರಿಯಂ ಕಟ್ಟಡದ ಶಿಲಾ ಫಲಕವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಕೇವಲ ಬಡ ಮತ್ತು ಮಧ್ಯಮ ವರ್ಗಗಳಲ್ಲದೇ ಸಿರಿವಂತರೂ ಕೂಡ ಮಠಮಾನ್ಯಗಳಲ್ಲಿ, ಪವಿತ್ರ ಕ್ಷೇತ್ರಗಳಲ್ಲಿ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ವಿವಾಹವಾಗುವ ಮೂಲಕಸಮಾಜಕ್ಕೆಮಾದರಿಯಾಗಬೇಕು ಎಂದು ಹಿತ ನುಡಿದರು.

ಕಾರ್ಯಕ್ರಮದ ದಿವ್ಯಸಾನ್ನಿಧ್ಯ ಮತ್ತು ಅಧ್ಯಕ್ಷತೆ ವಹಿಸಿದ್ದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ತಂದೆ-ತಾಯಿ ಮನೆಯಲ್ಲಿ ಹುಟ್ಟಿದ ಹೆಣ್ಣು ಮಗಳು ವಿವಾಹದ ನಂತರ ಇನ್ನೊಂದು ಮನೆಗೆ ಸೊಸೆಯಾಗಿ ಆ ಮನೆಯನ್ನು ಬೆಳಗುವ ಕೆಲಸ ಮಾಡುತ್ತಾರೆ. ತನ್ನ ತವರು ಮನೆಯಂತೆಯೇ ಅವಳು ತನ್ನ ಗಂಡನ ತಂದೆ-ತಾಯಿಗೆ ಮಗಳಾಗಿ ಆ ಮನೆಯ ಸದಸ್ಯರೊಂದಿಗೆ ಸಹೋದರಿಯಾಗಿ ತಾಳ್ಮೆ, ಸಹಕಾರ, ಜವಾಬ್ದಾರಿಯಿಂದ ಕುಟುಂಬವನ್ನು ಮುನ್ನಡೆಸಿಕೊಂಡು ಹೋದಾಗ ಆ ಮನೆಯಲ್ಲಿ ಸದಾ ಶಾಂತಿ, ಸಂತೋಷಗಳು ನೆಲೆಸಿರುತ್ತವೆ ಎಂದು ಹೇಳಿದರು.

ರಾಂಪುರ ಹಾಲಸ್ವಾಮಿ ಮಠದ ಶ್ರೀ ಶಿವಕುಮಾರ ಹಾಲಸ್ವಾಮೀಜಿ, ಹಿರೇಮಠ ಜಕ್ಕಲಿ ಬಿದರಗಡ್ಡೆ, ರಾಮಲಿಂಗೇಶ್ವರ ಮಠ ಹಾರನಹಳ್ಳಿ ಮಠದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಕೋಣಂದೂರು ಪುರವರ್ಗ ಮಠದ ಪಟ್ಟಣದ ಅಭಿನವ ಶ್ರೀ ಸಿದ್ದವೀರ ಶಿವಾಚಾರ್ಯ ಸ್ವಾಮೀಜಿ, ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಗಳು ನೂತನ ವಧು-ವರರನ್ನು ಹಾರೈಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಧ್ಯಕ್ಷೆ ಸುಮಾ ಮಂಜುನಾಥ ಇಂಚರ, ಶ್ರೀ ಮೃತ್ಯುಂಜಯ ಶಿವಾಚಾರ್ಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರವೀಣ್ ದೊಡ್ಡಗೌಡ್ರು, ಎಸ್.ಸಿ.ಆರ್. ಜೆ.ಸಿ. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಬಸವರಾಜ ಉಪ್ಪಿನ್, ರಾಣೇಬೆನ್ನೂರಿನ ವರ್ತಕ ಬಸವರಾಜ್ ಪಾಟೀಲ್, ತಾಲ್ಲೂಕು ವೀರಶೈವ ಪಂಚಮಸಾಲಿ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ಮಾತನಾಡಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷ ಸುರೇಂದ್ರನಾಯ್ಕ, ಕೆ.ಎಸ್. ಡಿ.ಎಲ್. ನಿರ್ದೇಶಕ ಶಿವು ಹುಡೇದ್, ಮುಖಂಡ ಮಂಜುನಾಥ್ ಇಂಚರ, ಕಸಬಾ ಸೊಸೈಟಿ ಸದಸ್ಯ ಬಿ.ಎಲ್. ಕುಮಾರಸ್ವಾಮಿ, ಪುರಸ್ಕೃತ ಸದಸ್ಯ ಹೊಸಕೇರಿ ಸುರೇಶ್, ಶ್ರೀ ಚನ್ನಪ್ಪ ಸ್ವಾಮಿ ವಿದ್ಯಾಪೀಠದ ಕಾರ್ಯದರ್ಶಿ ಚನ್ನಯ್ಯ ಬೆನ್ನೂರುಮಠ, ಶ್ರೀಮಠದ ವ್ಯವಸ್ಥಾಪಕ ಎಂ.ಪಿ.ಎಂ. ಚನ್ನಬಸಯ್ಯ, ಹಾಗು ಅನೇಕ ಗಣ್ಯರು, ಭಕ್ತರು ಪಾಲ್ಗೊಂಡಿದ್ದರು.

ಶ್ರೀ ಚನ್ನೇಶ್ವರ ಗಾನ ಕಲಾ ಸಂಘದಿಂದ ಪ್ರಾರ್ಥನೆ, ಮಠದ ಗುರುಕುಲದ ಸಾಧಕರಿಂದ ವೇದಘೋಷ, ಶ್ರೀ ಚನ್ನಮಲ್ಲಿಕಾರ್ಜುನ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ, ಪಟ್ಟಣಶೆಟ್ಟಿ ಪರಮೇಶ್ ಸ್ವಾಗತಿಸಿದರು. ವಿದ್ಯಾ ಟಿ. ಆರ್. ನಿರೂಪಿಸಿದರು.

# ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ ಪ್ರಧಾನಿಗೆ ಒಂಭತ್ತು ಪ್ರತಿಪಕ್ಷಗಳ ಪತ್ರ

ಹೈದರಾಬಾದ್, ಮಾ. 5 – ಕೇಂದ್ರದ ತನಿಖಾ ಸಂಸ್ಥೆಗಳನ್ನು ಪ್ರತಿಪಕ್ಷಗಳ ಸದಸ್ಯರ ವಿರುದ್ಧ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಒಂಭತ್ತು ಪ್ರತಿಪಕ್ಷಗಳ ನಾಯಕರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

**ಪ್ರಜಾಪ್ರಭುತ್ವದಿಂದ ಸರ್ವಾಧಿಕಾರದ ಕಡೆ ಸಾಗುತ್ತಿರುವ ಕುರಿತು, ರಾಜ್ಯಪಾಲರ ಹುದ್ದೆ ದುರ್ಬಳಕೆ ಕುರಿತೂ ಪತ್ರದಲ್ಲಿ ಪ್ರಸ್ತಾಪ**

ಮುಖ್ಯಮಂತ್ರಿಗಳಾದ ಮಮತಾ ಬ್ಯಾನರ್ಜಿ, ಅರವಿಂದ ಕೇಜ್ರಿವಾಲ್, ಕೆ. ಚಂದ್ರಶೇಖರ ರಾವ್, ಭಗವಂತ ಮಾನ್ ಸಹ ಈ ಜಂಟಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಪ್ರತಿಪಕ್ಷಗಳ ನಾಯಕರ ಮೇಲೆ ಕೇಂದ್ರ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿರುವುದನ್ನು ನೋಡಿದಾಗ ನಾವು ಪ್ರಜಾಪ್ರಭುತ್ವದಿಂದ ಸರ್ವಾಧಿಕಾರದ ಕಡೆ ಸಾಗುತ್ತಿರುವುದು ಕಂಡು ಬರುತ್ತಿದೆ. ರಾಜ್ಯಪಾಲರ ಹುದ್ದೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಪತ್ರದಲ್ಲಿ ಹೇಳಲಾಗಿದೆ. ಅಬಕಾರಿ ಪ್ರಕರಣದಲ್ಲಿ ಸಿಲುಕಿ ಬಂಧಿತ ದೆಹಲಿ ಮಾಜಿ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಪ್ರಕರಣವನ್ನೂ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ, ತೃಣಮೂಲ ಮಾಜಿ ನಾಯಕರಾದ ಸುವೇಂದು ಅಧಿಕಾರಿ ಹಾಗೂ ಮುಕುಲ್ ರಾಯ್ ವಿರುದ್ಧ ಭ್ರಷ್ಟಾಚಾರ ಪ್ರಕರಣಗಳಿದ್ದವು. ಅವರು ಬಿಜೆಪಿ ಸೇರಿದ ನಂತರ ಪ್ರಕರಣಗಳ ತನಿಖೆ ಮಂದವಾಗಿದೆ ಎಂದೂ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ.

ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಯಾದವ್, ಶಿವಸೇನೆಯ ಸಂಜಯ್ ರಾವತ್, ಸಮಾಜವಾದಿ ಪಕ್ಷದ ಅಜಮ್ ಖಾನ್, ಎನ್.ಸಿ.ಪಿ.ಯ ನವಾಬ್ ಮಲಿಕ್, ಅನಿಲ್ ದೇಶಮುಖ್, ಟಿ.ಎಂ.ಸಿ.ಯ ಅಭಿಷೇಕ್ ಬ್ಯಾನರ್ಜಿ ಮತ್ತಿತರರ ವಿರುದ್ಧ ಕೇಂದ್ರೀಯ ಸಂಸ್ಥೆಗಳು ಕ್ರಮ ತೆಗೆದುಕೊಂಡಿರುವ ಬಗ್ಗೆ ಪತ್ರದಲ್ಲಿ ಆಕ್ಷೇಪಿಸಲಾಗಿದೆ.

ತಮಿಳುನಾಡು, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣಗಳ ರಾಜ್ಯಪಾಲರು ಹಾಗೂ ದೆಹಲಿಯ ಲೆಫ್ಟಿನೆಂಟ್ ಗವರ್ನರ್‌ಗಳು ಸಂವಿಧಾನದ ಅಂಶಗಳನ್ನು ಉಲ್ಲಂಘಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ ಮತ್ತು ರಾಜ್ಯಗಳ ಕಾರ್ಯ ನಿರ್ವಹಣೆಗೆ ಅಡ್ಡಿಪಡಿಸುತ್ತಿದ್ದಾರೆ ಎಂದೂ ದೂರಲಾಗಿದೆ.

# ಹರಿಹರ : ಕಾಮಣ್ಣ-ರತಿದೇವಿ ಮೂರ್ತಿ ಪ್ರತಿಷ್ಠಾಪನೆ



ಹರಿಹರ, ಮಾ. 5 - ನಗರದ ನಡವಲಪೇಟೆ ಯುವಕ ಸಂಘದ ವತಿಯಿಂದ 61 ನೇ ವರ್ಷದ ಹೋಳಿ ಹಬ್ಬದ ನಿಮಿತ್ತವಾಗಿ ಕಾಮಣ್ಣ ರತಿದೇವಿ ಮೂರ್ತಿಯನ್ನು ಮೆರವಣಿಗೆ ನಂತರ ಪ್ರತಿಷ್ಠಾಪನೆ ಮಾಡಲಾಯಿತು.

ನಾಡಿದ್ದು ದಿನಾಂಕ 7 ರಂದು 6 ಗಂಟೆಯಿಂದ ವಿಶೇಷ ಪೂಜೆ ಮತ್ತು ಪ್ರಸಾದ ವಿತರಣೆ, ರಾತ್ರಿ 12 ಗಂಟೆಗೆ ಪೂರ್ವ ನಕ್ಷತ್ರದ ಶುಭಾಂಶದಲ್ಲಿ ಕಾಮದಹನ ಮಾಡಲಾಗುತ್ತದೆ. ದಿನಾಂಕ 8 ರಂದು ಬುಧವಾರ ಬೆಳಗ್ಗೆ ಹೋಳಿ ನಂತರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಮೆರವಣಿಗೆಯಲ್ಲಿ ದುರುಗೋಜಿ ಮೋಹನ್, ಚಂದನ್ ಮೂರ್ಕಲ್, ಜಗದೀಶ್ ಮಹೇಂದ್ರಕರ್, ಪ್ರಕಾಶ್ ತೇಲಕರ್, ಸಕ್ರಿ, ಹೋವಳೆ ಚಂದ್ರಕಾಂತ್, ರಾಜೇಶ್, ಸ್ವಾಮಿ, ಪ್ರವೀಣ್ ಮಜ್ಜಿಗೆ ಇದ್ದರು.

# ಕೊಟ್ಟೂರಿನಲ್ಲಿ ವಿಜೃಂಭಣೆಯ ಜೋಡಿ ರಥೋತ್ಸವ



ಕೊಟ್ಟೂರು, ಮಾ. 5 - ಪಟ್ಟಣದ ಕೋಟೆ ಭಾಗದ ಪೂರ್ವದ ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ರೇಣುಕಾಚಾರ್ಯ ಸ್ವಾಮೀಜಿಗಳ ಮೂರ್ತಿಗಳ ಜೋಡಿ ರಥೋತ್ಸವ ಇಂದು ಬ್ರಾಹ್ಮೀ ಮುಹೂರ್ತದಲ್ಲಿ ಭಕ್ತರ ಸಡಗರ, ಸಂಭ್ರಮಗಳೊಂದಿಗೆ ಜರುಗಿದವು.

ರಥೋತ್ಸವ ಚಾಲನೆ ಪಡೆಯುವುದಕ್ಕಿಂತ ಮುಂಚಿತವಾಗಿ ಉಭಯ ದೇವರುಗಳ ಮೂರ್ತಿಗಳನ್ನು ಆಯಾಗಾರ ಬಳಗದವರು ದೇವಸ್ಥಾನದಿಂದ ಸಕಲ ಬಿರುದಾವಳಿಗಳೊಂದಿಗೆ ಮೆರವಣಿಗೆ ಕೈಗೊಂಡು ಹೊರತಂದು ರಥಗಳ ಬಳಿಗೆ ತೆರಳಿದರು. ನಂತರ ಉತ್ಸವ ಮೂರ್ತಿಗಳನ್ನು ರಥದ ಸುತ್ತ ಮೂರು ಪ್ರದಕ್ಷಿಣೆಗಳನ್ನು ಹಾಕಿದರು. ವೀರಭದ್ರೇಶ್ವರ ರಥದಲ್ಲಿ ಕೊಟ್ಟೂರೇಶ್ವರ ಸ್ವಾಮಿಯ ಕ್ರಿಯಾ ಮೂರ್ತಿ ಶಿವಪ್ರಕಾಶ ಕೊಟ್ಟೂರು ದೇವರು, ರೇಣುಕ ಮೂರ್ತಿ ರಥದಲ್ಲಿ ಆರ್.ಎಂ.ಕೊಟ್ರೇಶ ಶಾಸ್ತ್ರೀ ಆಸೀನರಾಗಿದ್ದರು.

ನಂತರ ಶ್ರೀ ಸ್ವಾಮಿ ಪಟಾಕ್ಷಿ ಹರಾಜು ಪ್ರಕ್ರಿಯೆ ನಡೆದು 110000 ರೂ. ಗಳಿಗೆ ಕೂಗಿಹಳ್ಳಿ ನಾಗರಾಜ್, ತಮ್ಮದಾಗಿಸಿಕೊಂಡರು. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಜೋಡಿ ರಥೋತ್ಸವ ಆರಂಭಗೊಂಡಿತು. ರಥೋತ್ಸವ ಗೌಡರ ಬೀದಿ, ಹಿರೇಮಠ, ಮುಖ್ಯ ರಸ್ತೆ ಮೂಲಕ ಸಾಗಿ ನಂತರ ದೇವಸ್ಥಾನದ ಬಳಿ ಬಂದು ನೆಲೆ ನಿಂತಿತು. ಆಯಗಾರ ಬಳಗದ ಆರ್.ಎಂ, ಗುರು ಬಸವಸ್ವಾಮಿ, ಮಂಜುನಾಥ ಗೌಡ, ಶಿವಕುಮಾರ ಗೌಡ, ರಾಜುಗೌಡ, ಶಿವಕುಮಾರ ಮತ್ತಿತರರು ಉಪಸ್ಥಿತರಿದ್ದರು.

# ಜಿಎಸ್‌ಟಿಯ ಶೋಕಾಸ್ ನೋಟಿಸ್; ನಗರದಲ್ಲಿ ಇಂದು ಕಾರ್ಯಾಗಾರ

ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ನಗರದ ರೋಟರಿ ಬಾಲಭವನದ ಹಿಂಭಾಗದಲ್ಲಿರುವ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ತೆರಿಗೆ ಸಲಹೆಗಾರರು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳಿಗೆ ಜಿಎಸ್‌ಟಿಯ ಶೋಕಾಸ್ ನೋಟಿಸ್ ಮತ್ತು 2023-24 ರ ಹೊಸ ತಿದ್ದುಪಡಿಗಳು ವಿಷಯ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನ ಸಿಎ ಜತಿನ್ ಕ್ರಿಸ್ಟೋಫರ್ ಇವರು ಕಾರ್ಯಾಗಾರ ನಡೆಸಿಕೊಡುವರು. ದಾವಣಗೆರೆ ವಿವಿಯಿಂದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಅಥಣಿ ಎಸ್. ವೀರಣ್ಣ ಅವರನ್ನು ಸನ್ಮಾನಿಸಲಾಗುವುದು.

ಜಿಲ್ಲೆಯ ತೆರಿಗೆ ಸಲಹೆಗಾರರು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಆಗಮಿಸಿ ಕಾರ್ಯಾಗಾರದ ಸದುಪಯೋಗಪಡಿಸಿಕೊಳ್ಳುವಂತೆ ಸಂಘದ ಅಧ್ಯಕ್ಷ ಜಂಬಿಗಿ ರಾಧೇಶ್, ಕಾರ್ಯದರ್ಶಿ ಡಿ.ಎಂ. ರೇವಣಸಿದ್ಧಪ್ಪ ಕೋರಿದ್ದಾರೆ.

# ದೊಡ್ಡಬಾತಿಯಲ್ಲಿ ನಾಳೆ ರಥೋತ್ಸವ



ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಮಹಾರಥೋತ್ಸವವು ನಾಳೆ ದಿನಾಂಕ 7ರ ಮಂಗಳವಾರ ರಾತ್ರಿ 12 ಗಂಟೆಗೆ ನಡೆಯಲಿದ್ದು, ರಥೋತ್ಸವದ ಪ್ರಯುಕ್ತ ಇಂದು ಆವರಗೊಳ್ಳದ ಶ್ರೀ ವೀರಭದ್ರೇಶ್ವರ ಸ್ವಾಮಿಯು ದೊಡ್ಡಬಾತಿಗೆ ದಯಮಾಡಿಸುವುದು. ದಿನಾಂಕ 8ರ ಬುಧವಾರ ರಾತ್ರಿ ಓಕಳಿ ಜರುಗಲಿದೆ.

ರಥೋತ್ಸವದ ಪ್ರಯುಕ್ತ ನಾಳೆ ದಿನಾಂಕ 6ರ ಸೋಮವಾರ ನಡೆಯಬೇಕಿದ್ದ ವಾರದ ಸಂತೆಯನ್ನು ರದ್ದುಪಡಿಸಲಾಗಿದೆ ಎಂದು ಗ್ರಾಮ ಪಂಚಾಯಿತಿ ಪ್ರಕಟಣೆ ತಿಳಿಸಿದೆ.

# ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯ ಶ್ರೀ ಬಸವೇಶ್ವರ ರಥೋತ್ಸವ



ಹೊನ್ನಾಳಿ, 5 - ತಾಲ್ಲೂಕಿನ ತರಗನಹಳ್ಳಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವರ ರಥೋತ್ಸವ ಮತ್ತು ಸ್ವಾಮಿಯ ಹೂವಿನ ಅಡ್ಡಪಲ್ಲಕ್ಕಿ ಮಹೋತ್ಸವ ಭಕ್ತರ ಸಮ್ಮುಖದಲ್ಲಿ ನಿನ್ನೆ ವಿಜೃಂಭಣೆಯಿಂದ ನೆರವೇರಿತು.

ವೀರಗಾಸೆ ಕಲಾವಿದರ ನೃತ್ಯ, ವಿವಿಧ ವಾದ್ಯಮೇಳಗಳ ಮಂಗಳಘೋಷ ರಥೋತ್ಸವದ ಸಂಭ್ರಮಕ್ಕೆ ಮೆರುಗು ನೀಡಿದವು. ಅಲಂಕೃತ ರಥಕ್ಕೆ ಭಕ್ತರು ಮಂಡಕ್ಕಿ, ಮೆಣಸಿನಕಾಳು, ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ರಥ ಮುಂದಕ್ಕೆ ಚಲಿಸಿದ ನಂತರ ಭಕ್ತರು ನೆಲದ ಮೇಲೆ ಬಿದ್ದ ಮೆಣಸಿನಕಾಳುಗಳನ್ನು ಆಯ್ದುಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

ಗ್ರಾಮದಲ್ಲಿ ಬೆಲ್ಲದ ಬಂಡಿ ಮೆರವಣಿಗೆ ನಡೆಯಿತು. ನಂತರ ಓಕುಳಿ ಆಡಲಾಯಿತು. ಯುವಕರು ಒಬ್ಬರಿಗೊಬ್ಬರು ಬಣ್ಣ ಎರಚುತ್ತಾ ಸಂಭ್ರಮಿಸಿದರು. ಸಂಜೆ ಶ್ರೀ ಬಸವೇಶ್ವರ ದೇವರ ಹೂವಿನ ಅಡ್ಡಪಲ್ಲಕ್ಕಿ ಮಹೋತ್ಸವ ವಾದ್ಯಮೇಳಗಳೊಂದಿಗೆ ನೆರವೇರಿತು.

ಹರಕೆ ಹೊತ್ತ ಭಕ್ತರು ಕುಟುಂಬದವರೊಂದಿಗೆ ಆಗಮಿಸಿ ತಮ್ಮ ಮಕ್ಕಳ ಜವುಳ ಕಾರ್ಯವನ್ನು ಸ್ವಾಮಿಯ ಸನ್ನಿಧಿಯಲ್ಲಿ ನೆರವೇರಿಸಿದರು.


# ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ರವಿಚಂದ್ರ ಕೆ.ಸಿ. ಬಿನ್ ಕೆ. ಚಿನ್ನಪ್ಪ,** ವಾಸ #128, 'ರಿಯಾ', ರೈನ್‌ಬೋ ಡ್ರೈವ್, ಸರ್ಜಾಪುರ ಮೇನ್ ರೋಡ್, ವಿಪ್ರೋ ಕಾರ್ಪೊರೇಟ್ ಆಫೀಸ್ ಹತ್ತಿರ, ಬೆಂಗಳೂರು ದಕ್ಷಿಣ, ಬೆಂಗಳೂರು-560035 ಇವರು ನೀಡಿದ ಮಾಹಿತಿ ಮೇರೆಗೆ ಈ ಮೂಲಕ ನೀಡಿದ ಸಾರ್ವಜನಿಕ ಪ್ರಕಟಣೆ ಏನೆಂದರೆ, ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿದಾರರು **ಶ್ರೀ ಆರ್.ಎಸ್. ರಾಜು ಬಿನ್ ಆರ್. ಶಿವಪ್ಪ,** ವಾಸ : ದೊಡ್ಡಬೂದಿಹಾಳು ಗ್ರಾಮ, ದಾವಣಗೆರೆ ಜಿಲ್ಲೆ ಇವರಿಂದ ಕ್ರಯಕ್ಕೆ ಪಡೆಯುವವರಿದ್ದು, ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಪಟ್ಟಂತೆ ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು ಅಥವಾ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ವಕೀಲರ ಆಫೀಸಿಗೆ ಬಂದು ಭೇಟಿಯಾಗತಕ್ಕದ್ದು ಎಂದು ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ತರಲಾಗಿದೆ.

**ಷೆಡ್ಯೂಲ್**

ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸ್ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿ ದಾವಣಗೆರೆ ಇವರು ವಿಂಗಡಿಸಿರುವ ಹೌಸಿಂಗ್ ಬೋರ್ಡ್ ಕಾಲೋನಿಯ ಕುಂದುವಾಡ ಗ್ರಾಮದ ಸರ್ವೇ ನಂ. 108 ರಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್ ನಂ.368 MIG ಇದರ ಅಳತೆ ಪೂರ್ವ-ಪಶ್ಚಿಮ : 14.90 ಮೀಟರ್, ಉತ್ತರ-ದಕ್ಷಿಣ : 9.00 ಮೀಟರ್ (14.90 X 9.00 Sq. Mtrs) ಒಟ್ಟು 134.10 ಚದರ ಮೀಟರ್ ಉಳ್ಳ ನಿವೇಶನಕ್ಕೆ ಚಕ್ಕುಬಂದಿ :-

**ಪೂರ್ವಕ್ಕೆ :** ಸೈಟ್ ನಂ. 384 & 385 HIG-1, **ಪಶ್ಚಿಮಕ್ಕೆ :** ರೋಡು, **ಉತ್ತರಕ್ಕೆ :** ಸೈಟ್ ನಂ. 369 MIG, **ದಕ್ಷಿಣಕ್ಕೆ :** ಸೈಟ್ ನಂ. 367 MIG ಈ ಮಧ್ಯದ ಸೊತ್ತು.

**ವಕೀಲರು :**

**ಶ್ರೀಮತಿ ರೇಖಾ ಕೆ.ಎಸ್.** ಎಂ.ಎ., ಎಲ್.ಎಲ್.ಎಂ.,
#152, 10ನೇ ಕ್ರಾಸ್, ದೇವರಾಜ ಅರಸು ಲೇಔಟ್
'ಎ' ಬ್ಲಾಕ್, ದಾವಣಗೆರೆ-06.
**ಮೊ. ನಂ. 8660189725, 9242462689**

ದಿನಾಂಕ : 06-03-2023


# ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ದರ್ಶನ ಪಡೆದ ಎಸ್ಸೆಸ್



ದಾವಣಗೆರೆ, ಮಾ. 5 - ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇತಿಹಾಸ ಪ್ರಸಿದ್ಧ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯ ದರ್ಶನ ಪಡೆದರು. ಇದೇ ದಿನಾಂಕ 10ರಂದು ತಿಪ್ಪೇರುದ್ರಸ್ವಾಮಿ ದೊಡ್ಡ ರಥೋತ್ಸವ ನಡೆಯುವ ಹಿನ್ನೆಲೆಯಲ್ಲಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಕೆ.ಸಿ.ಕೊಂಡಯ್ಯ, ಹಾಲೇಶ್ ಗೌಡ , ಉದ್ಯಮಿ ಅಣಬೇರು ರಾಜಣ್ಣ ಹಾಗೂ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಶೀಘ್ರದಲ್ಲೇ ಪೌರ ಕಾರ್ಮಿಕರಿಗೆ ಮನೆ ಹಸ್ತಾಂತರ : ಸಚಿವ ಭೈರತಿ

**(1ನೇ ಪುಟದಿಂದ)** ಎಂಎಲ್‌ಸಿ ಮೋಹನ್ ಕೊಂಡಜ್ಜಿ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಪಾಲಿಕೆ ಮೇಯರ್ ವಿನಾಯಕ ಬಿ.ಹೆಚ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಪಾಲಿಕೆ ಆಯುಕ್ತೆ ರೇಣುಕಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೆ.ಮಹಮ್ಮದ್ ಮುಜೀಬುಲ್ಲ ನಿಧನ



ದಾವಣಗೆರೆ ಚಾಮರಾಜಪೇಟೆ ಚಾರ್ಲಿ ಪೈಲ್ವಾನ್ ರಸ್ತೆ ನಿವಾಸಿ ಲೇಟ್ ಹಾಜಿ ಅಬ್ದುಲ್ ರಬ್ ಸಾಬ್‌ರವರ ಪುತ್ರ ಪೂರಿ ಮರ್ಚೆಂಟ್ ಕೆ.ಮಹಮ್ಮದ್ ಮುಜೀಬುಲ್ಲ (62) ಅವರು ದಿನಾಂಕ 5-03-2023ರ ಭಾನುವಾರ ರಾತ್ರಿ 10ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6-03-2023ರ ಸೋಮವಾರ ಮಧ್ಯಾಹ್ನ 2 ಕ್ಕೆ ನಗರದ ಪಿ.ಬಿ ರಸ್ತೆಯಲ್ಲಿರುವ ಹಳೇಖಬರಸ್ತಾನದಲ್ಲಿ ನೆರವೇರಲಿದೆ.

## ವಾಣಿ. ಡಿ ನಿಧನ



ದಾವಣಗೆರೆ ವಿನೋಬನಗರದ 3ನೇ ಮುಖ್ಯರಸ್ತೆ 12ನೇ ಕ್ರಾಸ್‌ನ ವಾಸಿ ಬಿ.ಕೆ.ದಯಾನಂದ ಶೆಟ್ಟಿ ಅವರ ಧರ್ಮಪತ್ನಿ ಶ್ರೀಮತಿ ಡಿ.ವಾಣಿ (62) ಅವರು ದಿನಾಂಕ 05.03.2023ರ ಭಾನುವಾರ ತಡರಾತ್ರಿ 12.20ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.03.2023ರ ಸೋಮವಾರ ಸಂಜೆ 4 ಗಂಟೆಗೆ ವೈಕುಂಠಧಾಮದಲ್ಲಿ ನಡೆಯಲಿದೆ.

# ಪ್ರಾದೇಶಿಕ ಪಕ್ಷಗಳನ್ನು ಉಳಿಸಿಕೊಂಡು ನಮ್ಮನ್ನು ನಾವು ಉಳಿಸಿಕೊಳ್ಳಬೇಕಿದೆ

## ಹರಪನಹಳ್ಳಿ : ಜೆಡಿಎಸ್ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎನ್.ಎಂ.ನಬೀ ಸಾಬ್



ಹರಪನಹಳ್ಳಿ, ಮಾ.5- ರಾಷ್ಟ್ರೀಯ ಪಕ್ಷಗಳು ಕಳೆದ 75 ವರ್ಷಗಳಿಂದ ಜನರಿಗೆ ಮೋಸ ಮಾಡುತ್ತಾ ಜನಪ್ರಿಯ ಕೆಲಸಗಳನ್ನು ಮಾಡುವುದನ್ನೇ ಮರೆತಿದ್ದು, ಪ್ರಾದೇಶಿಕ ಪಕ್ಷಗಳನ್ನು ಉಳಿಸಿಕೊಳ್ಳುವುದರ ಮೂಲಕ ನಮ್ಮನ್ನು ನಾವು ಉಳಿಸಿಕೊಳ್ಳಬೇಕಿದೆ ಎಂದು ಮಾಜಿ ಸಚಿವ, ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ಎನ್.ಎಂ. ನಬೀ ಸಾಬ್ ಹೇಳಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಜೆಡಿಎಸ್ ತಾಲ್ಲೂಕು ಕಾರ್ಯಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ರಾಷ್ಟ್ರೀಯ ಪಕ್ಷಗಳನ್ನು ಕೇರಳ, ತಮಿಳುನಾಡು ಸೇರಿದಂತೆ ಬಹಳಷ್ಟು ರಾಜ್ಯಗಳು ತಿರಸ್ಕಾರ ಮಾಡಿವೆ, ಪ್ರಾದೇಶಿಕ ಪಕ್ಷಗಳಿಂದ ಮಾತ್ರ ಅಭಿವೃದ್ಧಿ ಸಾಧ್ಯ. ಪಂಚರತ್ನ ಯೋಜನೆಗಳ ಅನುಷ್ಠಾನಕ್ಕಾಗಿ ಕುಮಾರಸ್ವಾಮಿಯವರ ಕೈ ಬಲಪಡಿಸಲು ಅವರು ಕರೆ ನೀಡಿದರು.

ನಿಯೋಜಿತ ಜೆಡಿಎಸ್ ಅಭ್ಯರ್ಥಿ ನೂರ್‌ಅಹ್ಮದ್ ಮಾತನಾಡಿ, ರಾಷ್ಟ್ರೀಯ ಪಕ್ಷಗಳು ಹರಪನಹಳ್ಳಿಯ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ವಿಫಲವಾಗಿವೆ. ಮೂಲಭೂತ ಸೌಕರ್ಯ ಒದಗಿಸದೇ ಹರಪನಹಳ್ಳಿಯನ್ನು ಮೂಲೆಗುಂಪು ಮಾಡಲಾಗಿದೆ. ಹಳ್ಳಿಗಳು ಪ್ರಗತಿ ಹೊಂದಿದರೆ ಮಾತ್ರ ಕ್ಷೇತ್ರದ ಅಭಿವೃದ್ಧಿ ಸಾಧ್ಯ ಎಂಬ ಅರಿವು ಹೊಂದಿರುವ ನಾನು ಅದಕ್ಕಾಗಿ ಹಲವು ಯೋಜನೆ ಗಳನ್ನು ಕಲ್ಪಿಸಿಕೊಡಲು ಚಿಂತಿಸಿ ದ್ದೇನೆ, ಆದ್ದರಿಂದ ನನಗೆ ಆಶೀರ್ವದಿಸಬೇಕು ಎಂದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಶಿರಹಟ್ಟಿ ದಂಡೆಪ್ಪ ಮಾತನಾಡಿ, ಸಾಮೂಹಿಕ ನಾಯಕತ್ವದಲ್ಲಿ ಹೋರಾಟ ಮಾಡಿ ಹರಪನಹಳ್ಳಿಯಲ್ಲಿ ಜೆಡಿಎಸ್ ಗೆಲ್ಲಿಸುತ್ತೇವೆ ಎಂದು ಹೇಳಿದರು.

ಜೆಡಿಎಸ್ ನೂತನ ಕಾರ್ಯಾಧ್ಯಕ್ಷ ಪರಮೇಶ್ವರಪ್ಪ ಮಾತನಾಡಿ, ಪಂಚ ರತ್ನ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿರುವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬೆಂಬಲಿಸಿ ಎಂದರು.

ಕಂಬಟ್ರಹಳ್ಳಿ ಪರಮೇಶ್ವರಪ್ಪನವರಿಗೆ ತಾಲ್ಲೂಕು ಜೆಡಿಎಸ್ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಗೊಳಿಸಿದ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೊಟ್ರೇಶಪ್ಪ ಆದೇಶ ಪತ್ರ ನೀಡಿದರು. ಪ್ರಧಾನ ಕಾರ್ಯದರ್ಶಿ ಸಲೀಂ, ಮುಖಂಡರಾದ ಸಯ್ಯದ್ ಕಲಿಂಪಾಷ, ಎಸ್.ಎಚ್. ಸಯ್ಯದ್ ಸೇರಿದಂತೆ, ಇತರರು ಇದ್ದರು.

# ಭ್ರಷ್ಟಾಚಾರ ಹಕ್ಕು ಎಂದು ವಿಪಕ್ಷಗಳು ಭಾವಿಸಿವೆ : ಬಿಜೆಪಿ

ನವದೆಹಲಿ, ಮಾ. 5 – ಬಿಜೆಪಿ ದೇಶದ ಸರ್ವಾಂಗೀಣ ಬೆಳವಣಿಗೆಯ ಪರವಾಗಿದೆ. ಪ್ರತಿಪಕ್ಷಗಳು ಭ್ರಷ್ಟಾಚಾರ ಪ್ರಕರಣಗಳಿಂದ ಪರಸ್ಪರ ರಕ್ಷಿಸಿಕೊಳ್ಳುವಲ್ಲಿ ತೊಡಗಿವೆ ಎಂದು ಬಿಜೆಪಿ ಟೀಕಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕೆಲ ಪ್ರತಿಪಕ್ಷಗಳ ನಾಯಕರು ಜಂಟಿ ಪತ್ರ ಬರೆದು, ತನಿಖಾ ಸಂಸ್ಥೆಗಳು ವಿಪಕ್ಷಗಳನ್ನು ಬೆದರಿಸುತ್ತಿವೆ ಎಂದು ದೂರಿವೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ, ಪ್ರತಿಪಕ್ಷಗಳ ನಾಯಕರು ಭ್ರಷ್ಟಾಚಾರ ನಡೆಸು ವುದು ನಮ್ಮ ಹಕ್ಕು ಎಂದು ಭಾವಿಸಿದ್ದಾರೆ ಎಂದಿದ್ದಾರೆ.

ಭ್ರಷ್ಟಾಚಾರ ಪ್ರಕರಣಗಳನ್ನು ಎದುರಿಸುತ್ತಿರುವ ನಾಯಕರೇ ಈ ಪತ್ರಕ್ಕೆ ಸಹಿ ಹಾಕಿರುವುದು ಹಾಸ್ಯಾಸ್ಪದವಾಗಿದೆ. ಕೆಲವರು ಎರಡು ಪೀಳಿಗೆಗಳಿಂದ ಇಂತಹ ಆರೋಪಗಳನ್ನು ಎದುರಿಸುತ್ತಿದ್ದಾರೆ ಎಂದು ತ್ರಿವೇದಿ ತಿಳಿಸಿದ್ದಾರೆ. ಸಂವಿಧಾನಿಕ ಹುದ್ದೆಯಲ್ಲಿದ್ದಾಗ ಭ್ರಷ್ಟಾಚಾರ ನಡೆಸಿದವರು, ಈಗ ತನಿಖಾ ಸಂಸ್ಥೆಗಳು ತನಿಖೆ ನಡೆಸಬಾರದು ಎಂದು ಹೇಳುತ್ತಿದ್ದಾರೆ. ಇವರು ಭ್ರಷ್ಟಾಚಾರ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿರುವಂತಿದೆ ಎಂದವರು ಆಕ್ಷೇಪಿಸಿದ್ದಾರೆ.

# ಧರ್ಮಾಚರಣೆಯ ನಿರ್ಲಕ್ಷತನವೇ ಧರ್ಮ ಹಿಂದುಳಿಯಲು ಕಾರಣ



**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಶಂಕರ ಬಿದರಿ ಅಸಮಾಧಾನ**

ರಾಣೇಬೆನ್ನೂರು, ಮಾ. 5- ಐತಿಹಾಸಿಕ ವೀರಶೈವ ಧರ್ಮದ ಅಳವಡಿಕೆ, ಆಚರಣೆ, ಕಟ್ಟುಪಾಡುಗಳ ಪಾಲನೆ ಬಗ್ಗೆ ನಾವು ಗಮನ ಕೊಡದಿರುವುದರಿಂದ ನಮ್ಮ ಧರ್ಮ ಹಿಂದೆ ಉಳಿದಿದೆ ಎಂದು ನಿವೃತ್ತ ಪೊಲೀಸ್ ಮಹಾನಿರೀಕ್ಷಕ ಶಂಕರ ಬಿದರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಅವರು ತಾಲ್ಲೂಕಿನ ಲಿಂಗದಹಳ್ಳಿ ಹಿರೇಮಠದಲ್ಲಿ ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ, ಗುಗ್ಗುಳ, ಶಿವಲಿಂಗ ಸ್ಥಾಪನೆ, ಶಿವಲಿಂಗ ದೀಕ್ಷೆ, ಮಹಾರಥೋತ್ಸವ ಮತ್ತು ಸಾಮೂಹಿಕ ವಿವಾಹ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

2 ಸಾವಿರ ವರ್ಷಗಳ ಹಿಂದೆ ಹುಟ್ಟಿದ ಕ್ರೈಸ್ತ, 15 ಸಾವಿರ ವರ್ಷಗಳ ಹಿಂದಿನ ಮುಸಲ್ಮಾನ ಧರ್ಮ, 8 ನೂರು ವರ್ಷಗಳ ಹಿಂದಿನ ಲಿಂಗಾಯತ ಧರ್ಮ ಹಾಗೂ 5 ಸಾವಿರ ವರ್ಷಗಳ ಹಳೆಯದಾದ ಸಿಖ್ ಧರ್ಮಗಳ ಆಚರಣೆ ಹಾಗೂ ಬೆಳವಣಿಗೆಗಳ ಬಗ್ಗೆ ಆ ಸಮುದಾಯಗಳು ಹೆಚ್ಚು ಪ್ರಾಧಾನ್ಯತೆ ಕೊಡುತ್ತಿರುವುದರಿಂದ ಅವುಗಳು ಬಲಗೊಳ್ಳುತ್ತಿವೆ ಎಂದು ಅಭಿಪ್ರಾಯಿಸಿದರು.

ಪರಧರ್ಮಗಳನ್ನ, ಮಾನವ ಕುಲವನ್ನ ಪ್ರೀತಿಸಿ, ಮಾನವ ಧರ್ಮಕ್ಕೆ ಜಯವೆನ್ನುವ ವಿಶಾಲ ತಳಹದಿಯ ಮೇಲೆ ನೆಲೆ ನಿಂತ ವೀರ ಶೈವ ಧರ್ಮವನ್ನು ಬೆಳೆಸುವಲ್ಲಿ ಪ್ರತಿಯೊಬ್ಬ ವೀರಶೈವರ ಸನ್ನದ್ಧರಾಗಬೇಕು. ಈ ಪ್ರಯತ್ನಕ್ಕೆ ರೇಣುಕಾಚಾರ್ಯರ ಜಯಂತಿ ಒಂದು ಸಾಧನವಾಗಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್. ಎಸ್.ರಾಮಲಿಂಗಣ್ಣನವರ ಮಾತನಾಡಿ, ಸರ್ಕಾರ ಎಂದೋ ಮಾಡಬೇಕಿದ್ದ ರೇಣುಕಾ ಚಾರ್ಯರ ಜಯಂತಿಯನ್ನು ತಡವಾದರೂ ಈಗ ಪ್ರಾರಂಭಿಸಿರುವುದು ಸ್ವಾಗತಾರ್ಹವಾ ಗುವುದು. ನಮ್ಮ ವೀರಶೈವ ಮಠಗಳು ಪ್ರತಿ ವರ್ಷ ರೇಣುಕಾಚಾರ್ಯರ ಜಯಂತಿ ಆಚ ರಣೆ ಮಾಡಿ, ಅವರ ತತ್ವಾದರ್ಶಗಳನ್ನು ಸಮಾಜ ಬಾಂಧವರಿಗೆ ನೆನಪಿಸುತ್ತಾ ಆರೋಗ್ಯಕರ ಸಮಾಜ ನಿರ್ಮಿಸುತ್ತಲೇ ಇವೆ ಎಂದು ಹೇಳಿದರು.

ಮಠದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ನರಸಾಪುರ ಶಿವಕುಮಾರ. ಶಿವಶರಣರು ಸಾನಿಧ್ಯ ವಹಿಸಿದ್ದರು.

ಸಾರಿಗೆ ಸಂಸ್ಥೆ ಅಧ್ಯಕ್ಷ ಡಾ. ಬಸವರಾಜ ಕೇಲಗಾರ, ಕೈಗಾರಿಕಾ ನಿಗಮದ ನಿರ್ದೇಶಕಿ ಭಾರತಿ ಅಳವಂಡಿ, ಉದ್ಯಮಿ ಗುರು ಶಾಸ್ತ್ರೀ ಮಠ, ಕೆಇಬಿ ಎಂಜಿನಿಯರ್ ಗೋಪಾಲ ಲಮಾಣಿ ಮತ್ತಿತರರಿದ್ದರು. ಪ್ರಾಧ್ಯಾಪಕ ಸಿ. ಎನ್. ಪೂಜಾರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಿಟ್ಟದಹಳ್ಳಿ ಗಂಗಾಧರ ಶಾಸ್ತ್ರಿಗಳು ಕಾರ್ಯಕ್ರಮ ನಿರೂಪಿಸಿದರು.

# ನೀರು ಸರಬರಾಜು ಕಾರ್ಮಿಕರ ಖಾಯಮಾತಿಗೆ ಆಗ್ರಹಿಸಿ ಇಂದು ಪ್ರತಿಭಟನೆ

ದಾವಣಗೆರೆ, ಮಾ. 5- ಗುತ್ತಿಗೆ ಮತ್ತು ಹೊರ ಗುತ್ತಿಗೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ನೀರು ಸರಬರಾಜು ವಿಭಾಗದ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಆಗ್ರಹಿಸಿ ನಾಳೆ ದಿನಾಂಕ 6 ರಂದು ಬೆಳಿಗ್ಗೆ 10 ಗಂಟೆಗೆ ನಗರ ಪಾಲಿಕೆ ಮುಂಭಾಗ ನೀರು ಸರಬರಾಜು ಸ್ಥಗಿತ ಗೊಳಿಸಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ನೀರು ಸರಬರಾಜು, ಕಾವಲುಗಾರ ಹೊರ ಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎನ್. ನೀಲಗಿರಿಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗುತ್ತಿಗೆದಾರರು ಕಾರ್ಮಿಕರಿಂದ ಕಡಿತ ಮಾಡಿಕೊಂಡ ಪಿ.ಎಫ್., ಇಎಸ್ಐಗಳನ್ನು ಸರಿಯಾಗಿ ಪಾವತಿಸದೇ ಹಲವೆಡೆ ಹಗರಣಗಳು ನಡೆದಿವೆ. ಇದನ್ನು ತಡೆಯಲು ಮೂಲ ಮಾಲೀಕರಾದ ಸ್ಥಳೀಯ ಸಂಸ್ಥೆಗಳೇ ಇದನ್ನು ನಿರ್ವಹಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಅನಿಲ್ ಕುಮಾರ್, ರಾಧಾಕೃಷ್ಣ ಗುತ್ಯಪ್ಪ, ರಜನಿಕಾಂತ್, ಅಜ್ಜಯ್ಯ ಮತ್ತಿತರರರು ಉಪಸ್ಥಿತರಿದ್ದರು.

# ಡಾ. ಸದ್ಯೋಜಾತ ಶ್ರೀಗಳ ಆದರ್ಶ ಅನುಕರಣೀಯ



**ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳ 15 ನೇ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅಥಣಿ ವೀರಣ್ಣ**

ದಾವಣಗೆರೆ, ಮಾ. 5- ಲಿಂ. ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಆದರ್ಶ ಮತ್ತು ಸಂಸ್ಕಾರ ಅನುಕರಣೀಯ ಎಂದು ಬಾಪೂಜಿ ಎಂಬಿಎ ಕಾಲೇಜಿನ ಅಧ್ಯಕ್ಷ ಅಥಣಿ ಎಸ್. ವೀರಣ್ಣ ಹೇಳಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಹಿರೇಮಠದ ಆವರಣದಲ್ಲಿ ನಿನ್ನೆ ಏರ್ಪಾಡಾಗಿದ್ದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳ 15 ನೇ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸದ್ಯೋಜಾತ ಶ್ರೀಗಳ ಸೇವೆ ಅನನ್ಯವಾದುದು. ಅವರಲ್ಲಿದ್ದ ಆದರ್ಶ ಪ್ರಾಯ ವ್ಯಕ್ತಿತ್ವ, ಸ್ನೇಹಮಯ ಭಾವನೆಯನ್ನು ಯಾರೂ ಮರೆಯುವಂತಿಲ್ಲ. ಅವರ ಧಾರ್ಮಿಕ, ಶೈಕ್ಷಣಿಕ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳು ಅವಿಸ್ಮರಣೀಯ ಎಂದರು.

ಜವಳಿ ವರ್ತಕ ಬಿ.ಸಿ. ಉಮಾಪತಿ ಮಾತನಾಡಿ, ಸದ್ಯೋಜಾತ ಶ್ರೀಗಳು ಕೇವಲ ಸ್ವಾಮೀಜಿ ಅಷ್ಟೇ ಅಲ್ಲದೇ ಕಾಯಕ ಯೋಗಿಯಾಗಿದ್ದರು. ಸರಳ ಸ್ವಭಾವ, ಜಾತ್ಯತೀತ ಮನೋಭಾವ ಹೊಂದಿದ ಅವರು ಮಾತೃಹೃದಯಿಗಳಾಗಿದ್ದರು ಎಂದು ಹೇಳಿದರು.

ನಿತ್ಯ ಮಠದ ಸ್ವಚ್ಛತೆ, ಅಡುಗೆಯನ್ನು ಶ್ರೀಗಳೇ ಮಾಡಿಕೊಳ್ಳುತ್ತಿದ್ದರು. ಹಿರೇಮಠ ಶಿವಾಚಾರ್ಯರ ತವರು ಮನೆ ಆಗಿತ್ತು. ಧರ್ಮ ಪ್ರಚಾರ ಕಾರ್ಯವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡುತ್ತಿದ್ದರು ಎಂದರು.

ಬಹಳಷ್ಟು ಮಂದಿ ಬಸವಣ್ಣನವರ ಅನುಯಾಯಿಗಳು ಎಂದು ಹೇಳಿ ಬಸವ ತತ್ವವನ್ನು ಅವರೇ ಪಾಲಿಸುವುದಿಲ್ಲ. ಸದ್ಯೋಜಾತ ಸ್ವಾಮೀಜಿ ನುಡಿದಂತೆ ನಡೆದವರು. ಅವರದು ಆದರ್ಶದ ಬದುಕಾಗಿತ್ತು. ಬೋಧಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಶ್ರೀಗಳ ಸೇವೆಯನ್ನು ಕೊಂಡಾಡಿದರು.

ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಆರಾಧ್ಯ ಉಪಸ್ಥಿತರಿದ್ದರು. ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಂ. ದಾರುಕೇಶ್ 'ಸಮಾಜಕ್ಕೆ ಸ್ವಾಮೀಜಿಗಳ ಕೊಡುಗೆ' ಕುರಿತು ಮಾತನಾಡಿದರು.

ಶ್ರೀಮತಿ ವಿಜಯ ಹಿರೇಮಠ ಪ್ರಾರ್ಥಿಸಿದರು. ಬಾಪೂಜಿ ಎಂ.ಬಿ.ಎ. ಕಾಲೇಜು ಪ್ರಾಚಾರ್ಯ ಡಾ. ಸ್ವಾಮಿ ತ್ರಿಭುವಾನಂದ ಸ್ವಾಗತಿಸಿದರು. ಶ್ರೀಮತಿ ಡಿ.ಆರ್. ಕೃಷ್ಣವೇಣಿ ಮತ್ತು ವಾಸವಿ ಭಜನಾ ಮಂಡಳಿ ಸದಸ್ಯರು ಸಂಗಿತ ಕಾರ್ಯಕ್ರಮ ನಡೆಸಿಕೊಟ್ಟರು.

# ಹಳೆ ಆಸ್ಪತ್ರೆ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ಒತ್ತಾಯ

ಹರಿಹರ, ಮಾ. 5 - ಹಳೆ ಪಿ.ಬಿ. ರಸ್ತೆಯ ಪಕ್ಕದಲ್ಲಿರುವ ಹಳೆ ಆಸ್ಪತ್ರೆ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಬೇಕು ಎಂದು ನಾಗರಿಕ ಹೋರಾಟ ಸಮಿತಿಯ ಅಧ್ಯಕ್ಷ ಹೆಚ್. ನಿಜಗುಣ, ಪ್ರಧಾನ ಕಾರ್ಯದರ್ಶಿ ನಂದಿಗಾವಿ ಶ್ರೀನಿವಾಸ್, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಿಸುವುದರಿಂದ ಇಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ಅಡ್ಡಿಯಾಗುತ್ತದೆ ಎಂದವರು ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ ಕೈಗಾರಿಕಾ ಸ್ಥಾಪಿಸಿ ಗೈತವೈಭವ ಮರುಕಳಿಸುವಂತೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾರ್ವಜನಿಕರ ಮುಂದೆ ಹೇಳಿದ್ದರು. ಆದರೆ, ಇದುವರೆಗೆ ಆ ಕೆಲಸವು ಕಾರ್ಯಗತಗೊಳಿಸಲು ಆಗಲಿಲ್ಲ ಎಂದಿದ್ದಾರೆ.

ಸಂಸದರು ಮೂಲ ಸೌಕರ್ಯಗಳ ಕೊರತೆ ನೆಪ ವನ್ನು ಮುಂದೆ ಇಟ್ಟುಕೊಂಡು ಮೆಡಿಕಲ್ ಕಾಲೇಜು ಮಂಜೂರಾತಿಗೆ ಪ್ರಯತ್ನ ಮಾಡಲಿಲ್ಲ. ಹರಿಹರೇಶ್ವರ ದೇವಸ್ಥಾನವನ್ನು ಎ ದರ್ಜೆಗೆ ಮಾರ್ಪಾಟು ಮಾಡಲಿಲ್ಲ, ಬೈರನಪಾದ ಯೋಜನೆ ಮತ್ತು ಅಗಸನಕಟ್ಟೆ ಕೆರೆ ಅಭಿವೃದ್ಧಿ ಮಾಡಲಿಲ್ಲ ಎಂದವರು ಆಕ್ಷೇಪಿಸಿದ್ದಾರೆ.

ಇವೆಲ್ಲಾ ಮಾಡಿದರೆ ಹರಿಹರ ನಗರ ದಾವಣಗೆರೆಗಿಂತ ಪ್ರಬಲವಾಗಿ ಬೆಳೆಯುತ್ತದೆ ಎಂದು ಸಂಸದರು ಉದ್ದೇಶಪೂರ್ವಕವಾಗಿ ಹರಿಹರ ನಗರಕ್ಕೆ ಅನ್ಯಾಯವನ್ನು ಮಾಡುವುದಕ್ಕೆ ಮುಂದಾಗಿದ್ದಾರೆ ಎಂಬ ಬಲವಾದ ಅನುಮಾನ ಹುಟ್ಟುಕೊಂಡಿದೆ ಎಂದೂ ಅವರು ಹೇಳಿದ್ದಾರೆ

# ವಿಶ್ವ ಜಲ ದಿನಾಚರಣೆ: ಸ್ವರಚಿತ ಕವನ ಸ್ಪರ್ಧೆ

ದಾವಣಗೆರೆ, ಮಾ.5- ವಿಶ್ವ ಜಲ ದಿನಾಚರಣೆ ಅಂಗವಾಗಿ ಸುಯೇಜ್ 'ಕಂಪನಿ ವತಿಯಿಂದ ಸ್ವರಚಿತ ಕವನ ಸ್ಪರ್ಧೆಗಳಿಗೆ ಕವನಗಳನ್ನು ಆಹ್ವಾನಿಸಲಾಗಿದೆ.

'ಜಲ ಸಂರಕ್ಷಣೆಯ ಮಹತ್ವ' ಕುರಿತು ಕವನಗಳನ್ನು ರಚಿಸಿರಬೇಕು. ದಾವಣಗೆರೆ ನಗರದ 18 ರಿಂದ 30 ವಯೋಮಾನದ ಹಾಗೂ 30 ರಿಂದ 60 ವರ್ಷದವರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದ್ದು, 18 ರಿಂದ 25 ಸಾಲುಗಳ ಮಿತಿಯಲ್ಲಿ ಕವನಗಳನ್ನು ರಚಿಸಿರಬೇಕು. ಕವನಗಳು ಅನುವಾದಗಳಾಗಿರದೇ ಸ್ವರಚಿತವಾಗಿರಬೇಕು. ಕವನಗಳನ್ನು ಕಳುಹಿಸಲು 15 ನೇ ಮಾರ್ಚ್ ಕೊನೆಯ ದಿನವಾಗಿರುತ್ತದೆ.

ಕವನಗಳನ್ನು ಎ4 ಸೈಜಿನ ಬಿಳಿ ಹಾಳೆಯಲ್ಲಿ ಟೈಪ್ ಮಾಡಿ, ಸುಯೇಜ್ ಪ್ರೋ, ಪ್ರೈ ಲಿ. ಸಪ್ತಗಿರಿ , ಎಸ್ಎಸ್ಎಸ್ ಪ್ಲಾಜಾ, 2 ನೇ ಮಹಡಿ, ನಂ 565 A, ಆದಾಯ ತೆರಿಗೆ ಇಲಾಖೆಯ ಪಕ್ಕದಲ್ಲಿ ಹದಡಿ ರಸ್ತೆ ದಾವಣಗೆರೆ ಅಥವಾ 9886477771 ವ್ಯಾಟ್ಸಾಪ್‌ಗೆ ಕಳುಹಿಸುವಂತೆ ಕೋರಲಾಗಿದೆ.

# ಭಾರತೀಯರ ಬದುಕನ್ನು ಆವರಿಸಿಕೊಳ್ಳುತ್ತಿರುವ ಅಮೆರಿಕಾ



ಚನ್ನಗಿರಿ, ಮಾ. 5- ಭಾರತೀಯರ ಬದುಕನ್ನು ನಮಗೆ ಗೊತ್ತಿಲ್ಲದೆ ಅಮೆರಿಕಾ ಆವರಿಸಿಕೊಳ್ಳುತ್ತಿದೆ. ಪಿಜ್ಜಾ, ಬರ್ಗರ್, ಜೀನ್ಸ್ ಬಟ್ಟೆ ಮಾರಾಟ ಪ್ರಧಾನ ರಸ್ತೆಗಳಲ್ಲಿರುತ್ತವೆ. ಆದರೆ ನಮ್ಮ ರಾಗಿಮುದ್ದೆ ಖಾನಾವಳಿಗಳು ಮತ್ತು ಬಟ್ಟೆ ಹೊಲಿಯುವ ದರ್ಜಿಗಳನ್ನು ಸಂದಿ ಮೂಲೆಗಳಲ್ಲಿ ಹುಡುಕಿಕೊಂಡು ಹೋಗಬೇಕು ಎಂದು ಪ್ರೊ. ಎಂ.ಕೃಷ್ಣೇಗೌಡರು ಅಭಿಪ್ರಾಯಪಟ್ಟರು.

ಚನ್ನಗಿರಿ ತಾಲ್ಲೂಕು ಹರನಹಳ್ಳಿ- ಕೆಂಗಾಪುರ ಗ್ರಾಮದಲ್ಲಿ ನಡೆದ ದಾವಣಗೆರೆ ಜಿಲ್ಲಾ 12ನೇಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ' ಕನ್ನಡ ನುಡಿಯ ಉಳಿವಿಗೆ ಗ್ರಾಮೀಣ ಜನರ ಕೊಡುಗೆ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಹಿಂದೆ ನಗರಗಳನ್ನು ಹಳ್ಳಿಗಳು ಸಾಕುತ್ತಿದ್ದವು. ಈಗ ಹಳ್ಳಿಗಳು ನಗರಗಳಿಗೆ ಕೈಚಾಚುವಂತಾಗಿರುವುದು ವಿಪರ್ಯಾಸ ಎಂದರು. ಆರ್ಥಿಕ ಸ್ಥಿತ್ಯಂತರಗಳಿಂದ ಹಳ್ಳಿಗಳು ಸೊರಗುವಂತಾಗಿವೆ.


ಕೃಷಿಕರಿಗೆ ಹೆಣ್ಣು ಕೊಡಲು ಹಿಂಜರಿಯುವ ಪರಿಸ್ಥಿತಿ ಉಂಟಾಗಿದೆ. ಆದರೆ ಗ್ರಾಮೀಣ ಜನರ ಬದುಕಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಜೀವಂತಿಕೆಯಿಂದ ಕೂಡಿದೆ ಎಂದರು.

ಕನ್ನಡ ಸುಂದರವಾದ ಭಾಷೆ. ಅದರ ಸೊಗಡನ್ನು ಗ್ರಾಮೀಣರ ಬಾಯಿಯಲ್ಲಿ ಕೇಳುವುದೇ ಚಂದ. ನುಡಿಗಟ್ಟು ಮತ್ತು ಪದಗಳ ಅರ್ಥವನ್ನು ಬೇರೆ ಬೇರೆ ನೆಲೆಯಲ್ಲಿ ವಿಸ್ತರಿಸುವ ಗುಣ ಕನ್ನಡ ಭಾಷೆಯಲ್ಲಿದೆ ಎಂದು ಹೇಳಿದರು. ಪ್ರತಿಯೊಂದು ಗಿಡ ಮರ ಬಳ್ಳಿಗಳಿಗೆ, ವಸ್ತುಗಳಿಗೆ, ಕೃಷಿ ಪರಿಕರಗಳಿಗೆ, ಶರೀರದ ಅಂಗಾಂಗಗಳಿಗೆ, ಅಳತೆ ಮಾಪನಗಳಿಗೆ ಕನ್ನಡದಲ್ಲಿ ನಿಖರವಾದ ಪದಗಳಿವೆ. ಇಂಗ್ಲಿಷಿನಲ್ಲಿ ಈ ವೈವಿಧ್ಯತೆಯನ್ನು ಕಾಣಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಸೋಮೇಶ್ವರ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೆ ಎಂ ಸುರೇಶ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಶಿವಯೋಗಿ ಸ್ವಾಮಿ ಮುಂತಾದವರು ಪಾಲ್ಗೊಂಡಿದ್ದರು. ನಾಗರಾಜ ಸಿರಿಗೆರೆ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಕುಕ್ಕುವಾಡ ಸಕ್ಕರೆ ಕಾರ್ಖಾನೆ ವಿರುದ್ಧ ಇಂದು ಪ್ರತಿಭಟನೆ

ಕುಕ್ಕುವಾಡದಲ್ಲಿರುವ ಸಕ್ಕರೆ ಕಾರ್ಖಾನೆಯಿಂದ ಆಗುತ್ತಿರುವ ಪರಿಸರ ಹಾನಿ ಮತ್ತು ಕಬ್ಬು ಬೆಳೆದಿರುವ ರೈತರಿಗೆ ಆಗುತ್ತಿರುವ ಅನ್ಯಾಯ ವಿರೋಧಿಸಿ ರೈತ ಒಕ್ಕೂಟದಿಂದ ಇಂದು ಬೆಳಿಗ್ಗೆ 10.30ರಂದು ಕಾರ್ಖಾನೆಯ ಎದುರು ರಸ್ತೆ ತಡೆದು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಒಕ್ಕೂಟದ ಸಂಚಾಲಕ ಬಿ.ಎಂ. ಸತೀಶ್ ತಿಳಿಸಿದ್ದಾರೆ.



**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಯುರೋ ಸ್ಕೂಲ್ ಹತ್ತಿರ, 35x60 ಉತ್ತರ-ಪೂರ್ವ ಕಾರ್ನರ್. 40x65 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಉತ್ತರ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಬಾಡಿಗೆಗೆ**
ಸರಸ್ವತಿ ಬಡಾವಣೆ, 'ಬಿ' ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, ಕೆ.ಎಸ್.ಎಸ್. ಕಾಲೇಜ್ ಎದುರು ರಸ್ತೆ, "ಶ್ರೀಕರ" #829/15, ಪೂರ್ವ ದಿಕ್ಕು, 2ಬೆಡ್ ರೂಂ, ಬೋರ್/ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್, 1ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ.
96203 99426

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**EC / ಇಸಿ**
**E-swathu**
**Khatha Change**
**Building Licence**
Call :
96118-66449

**ಸೈಟ್‌ಗಳು ಮಾರಾಟಕ್ಕಿವೆ ಮತ್ತು ಮನೆಗಳು ಇವೆ**
ಡಾಲರ್ಸ್ ಕಾಲೋನಿ 30x52 ಉತ್ತರ, ವಿನಾಯಕ 30x50 ದಕ್ಷಿಣ, ಸಿದ್ಧವೀರಪ್ಪ ಬಡಾವಣೆ 33x50 ಪೂರ್ವ.
ಏಜೆಂಟರು S. ಯಲ್ಲೋಜಿ ರಾವ್
97418 11694

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**TO - LET**
2 BHK 1st Floor
# 1663/26, 11th Main, 11th Cross,
Siddaveerappa Badavane
94489 23973

**ತಕ್ಷಣ ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಆಕರ್ಷಕ ವೇತನದೊಂದಿಗೆ ಊಟ, ವಸತಿ ನೀಡಲಾಗುವುದು.
81528 82277, 97428 29451

**ಮನೆಗಳು ಬಾಡಿಗೆಗೆ ಇವೆ**
ನಿಜಲಿಂಗಪ್ಪ ಬಡಾವಣೆ #264, 2ನೇ ಮೇನ್, ಆರ್.ವಿ ಪಬ್ಲಿಕ್ ಶಾಲೆ ರಸ್ತೆ, ಕನಕಶ್ರೀ ಅಪಾರ್ಟ್‌ಮೆಂಟ್‌ನಲ್ಲಿ ಸುಸಜ್ಜಿತ ಡಬಲ್ ಬೆಡ್ ರೂಂ ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿರಿ.
80958 99966, 98443 26096

**ಮಳಿಗೆ ಮತ್ತು ಗೋಡೌನ್ (ಅಟ್ಯಾಚ್) ಬಾಡಿಗೆಗೆ**
ವಿದ್ಯಾರ್ಥಿ ಭವನ ಹತ್ತಿರ ಕೆಇಬಿ ಆಫೀಸ್ ಎದುರು, ದಾವಣಗೆರೆ.
91418 75151

**ಬೇಕಾಗಿದ್ದಾರೆ**
ಡಿಲೆವರಿ ಬಾಯ್ಸ್ ಹಾಗೂ ಟಾಟಾ ಏಸ್ ಓಡಿಸಲು ಲೈಸನ್ಸ್ ಹಾಗೂ ಅನುಭವವುಳ್ಳ ಡ್ರೈವರ್.
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ.
8971504492, 8105699985

**ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಸಿಟಿಜನ್ಸ್ ದಾ, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
99727 77444, 93421 95459
96863 63666

**ಬೇಕಾಗಿದ್ದಾರೆ**
ಬಾಲಾಜಿ ಕಿರಾಣಿ ಸ್ಟೋರ್‌ನಲ್ಲಿ ಕೆಲಸ ಮಾಡಲು ಇಬ್ಬರು ಹುಡುಗರು ಬೇಕಾಗಿದ್ದಾರೆ. ಬಿ.ಐ.ಇ.ಟಿ. ರೋಡ್, ಆಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
83103 15114

**REQUIRED**
Office Executive Skills : Good Communication With Basic Computer,
P.J. Extension, Davangere.
99006 66122

**2BHK ಮನೆ ಬಾಡಿಗೆಗೆ**
2ನೇ ಫ್ಲೋರ್‌ನಲ್ಲಿ 2BHK ಮನೆ ಬಾಡಿಗೆಗೆ ಇದೆ. 'ಮಾತೃಛಾಯ' ಚೌಕಿಪೇಟೆ, ಜಿಗಟೇರಿ ಗಲ್ಲಿ ಗೌಡರ ಜಯದೇವಪ್ಪ ಸಿಲ್ಕ್ ಹೌಸ್ ಹಿಂಭಾಗ, ದಾವಣಗೆರೆ.
99804 56792

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ. ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ
ನುರಿತ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್,
ಡೆಲಿವರಿ ಬಾಯ್ಸ್, ಅಕೌಂಟ್ ಎಕ್ಸಿಕ್ಯೂಟಿವ್ಸ್
89045 80030
08192 463415
76767 62216

**ಬೇಕಾಗಿದ್ದಾರೆ**
ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 12000, ಕೆಲಸ 12 ಗಂಟೆ, ಊಟ, ರೂಂ ಉಚಿತ. ವಯಸ್ಸು 18 ರಿಂದ 30. ಸಂಪರ್ಕಿಸಿ :
97400 98064
97400 98047

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
**GST & INCOME TAX**
**ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಸ್ವತಂತ್ರ ಉದ್ದಿಮೆಯ ಅವಕಾಶ ನಿಮಗೆ ನೀವೇ ಬಾಸ್ ಆಗಿ**
ಪೂರಕ ಆದಾಯ ಗಳಿಸಿ, ತರಬೇತಿ ಮತ್ತು ಬೆಂಬಲ ನೀಡಲಾಗುತ್ತದೆ.
ಆಸಕ್ತರು ಸಂಪರ್ಕಿಸಿ:
ಅಜಯ್, 96635 88115

**ಬೇಕಾಗಿದ್ದಾರೆ**
LPG ಗೋಡೌನ್ ಮ್ಯಾನೇಜರ್ ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 8.30 ರಿಂದ ಸಂಜೆ 6.30ರವರೆಗೆ. ಸಂಪರ್ಕಿಸಿ :
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ದಾವಣಗೆರೆ.

**ಬೇಕಾಗಿದ್ದಾರೆ**
ಬಾರ್ ಮತ್ತು ರೆಸ್ಟೋರೆಂಟ್‌ನಲ್ಲಿ ಅಡುಗೆ ಭಟ್ಟರು ಮತ್ತು ಸಪ್ಲೈಯರ್ ಬೇಕಾಗಿದ್ದಾರೆ.
80889 56656

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 2000/- ದಿಂದ 1400/- ಕಂತುಗಳು, ಸ್ಕಂದ ಚಿಟ್ ಫಂಡ್ಸ್- (ರಿ).
ಸಂಪರ್ಕಿಸಿ :
78997 75159

# ದೇಶದ ಎಲ್ಲಾ ಕ್ಷೇತ್ರಗಳಲ್ಲಿ ವಿಜ್ಞಾನದ ಕೊಡುಗೆ ಅಪಾರ

ದಾವಣಗೆರೆ, ಮಾ. 5 - ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಜಾಗತಿಕವಾಗಿ ಭಾರತ ದೇಶದ ಕೊಡುಗೆ ಅಪಾರ ಎಂದು ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ದೇವರಾಜ ಟಿ.ಎನ್. ತಿಳಿಸಿದರು.



ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ದೇವರಾಜ್

ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ ಕುವೆಂಪು ವಿದ್ಯಾ ಸಂಸ್ಥೆ, ಶ್ಯಾಗಲೆ ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಅಂತರರಾಷ್ಟ್ರೀಯ ಸಿರಿ ಧಾನ್ಯಗಳ ವರ್ಷ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ವಿಜ್ಞಾನದ ಕೊಡುಗೆ ಅಪಾರವಾಗಿದ್ದು, ಹೊಸ ಸಂಶೋಧನೆಯಿಂದ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸುವ ನಿಟ್ಟಿನಲ್ಲಿ ಯುವಕರ ಪಾತ್ರ ಹೆಚ್ಚಾಗಬೇಕಿದೆ; ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಕಲಿಕೆಗಾಗಿ ಪ್ರಶ್ನಿಸುವ ಅಭಿರುಚಿ ಬೆಳೆಯಬೇಕು. ಇಂಗ್ಲಿಷ್ ಬಗೆಗಿನ ಕಾಠಿಣ್ಯವೆಂಬ ಧೋರಣೆಯನ್ನು ಬದಲಾಯಿಸಲು ಕೆಲ ಸುಲಭ ಸೂತ್ರಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ತೋಟಗಾರಿಕಾ ವಿಜ್ಞಾನಿ ಬಸವನಗೌಡ ಎಂ.ಜಿ., ಇಂದು ಕೃಷಿ ಕ್ಷೇತ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೊಡುಗೆಯಿಂದಾಗಿ ಆಹಾರದಲ್ಲಿ ನಮ್ಮ ದೇಶ ಸ್ವಾವಲಂಬಿಯಾಗಲು ಸಾಧ್ಯವಾಗಿದೆ. ಇಡೀ ಜಗತ್ತಿಗೇ ಆಹಾರವನ್ನು ಪೂರೈಸುವ ನಿಟ್ಟಿನಲ್ಲಿ ನಾವು ಯಶಸ್ವಿಯಾಗಲು ವಿಜ್ಞಾನದ ಕೊಡುಗೆ ಅಪಾರವಾಗಿದೆ ಎಂದು ಅಭಿಪ್ರಾಯಪಟ್ಟರು. ಇಂದು ಆಹಾರ ಮತ್ತು ಆರೋಗ್ಯದ ಬಗ್ಗೆ ಜನರಲ್ಲಿ ಅತೀವ ಜಾಗೃತಿ ಮೂಡಿದ್ದು ಸಿರಿಧಾನ್ಯಗಳ ಬಳಕೆಯಿಂದಾಗಿ ಉತ್ತಮ ಆರೋಗ್ಯ ಹೊಂದಲು ಸಹಾಯವಾಗುವುದು. ದಿನಕ್ಕೊಂದು ಸಿರಿಧಾನ್ಯ ತಿಂದರೆ ರೋಗ ಮುಕ್ತ ಜೀವನವನ್ನು ನಡೆಸಬಹುದೆಂದು ಅವರು ಕಾರ್ಯಕ್ರಮದಲ್ಲಿ ತಿಳಿಸಿದರು.

ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ ಬಿ.ಒ ಮಾತನಾಡಿ ಸಿರಿ ಧಾನ್ಯಗಳ ಬೆಳೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಪ್ರತಿ ಹೆಕ್ಟೇರ್‌ಗೆ 10,000 ಗಳ ಪ್ರೋತ್ಸಾಹ ಧನವನ್ನು ನೀಡುತ್ತಿದ್ದು ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕುವೆಂಪು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸಿದ್ದಪ್ಪ ಬಿ.ಸಿ. ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ವಿಜ್ಞಾನಿಗಳೊಂದಿಗೆ ಆಚರಿಸಿದ್ದು ನಮ್ಮ ಸಂಸ್ಥೆಯ ಅದೃಷ್ಟವೇ ಸರಿ. ಭಾರತ ದೇಶದಲ್ಲಿ ಓದಿದ ಹಲವಾರು ವಿಜ್ಞಾನಿಗಳು ಪ್ರಪಂಚದ ಮೂಲೆ, ಮೂಲೆಗಳಲ್ಲಿ ತಮ್ಮ ಕೊಡುಗೆಗಳನ್ನು ನೀಡುತ್ತಿರುವುದು ನಮ್ಮ ತಾಯಿ ನಾಡಿಗೆ ಸಂದ ಗೌರವ ಎಂದು ಅವರು ತಿಳಿಸಿದರು.

ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷದ ಅಂಗವಾಗಿ ಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಇದೇ ಸಮಯದಲ್ಲಿ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಸಿರಿಧಾನ್ಯದಿಂದ ತಯಾರಿಸಿದ ಬಿಸ್ಕೆಟ್ ಅನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯ ಹನುಮಂತಪ್ಪ, ಬಸವರಾಜ್, ಆಕಾಶ್, ಕುವೆಂಪು ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಭಾರತ – ಭೂತಾನ್ ಗಡಿಯಲ್ಲಿ 18 ಕಿ.ಮೀ. ಉದ್ದದ ಸೌರ ಬೇಲಿ

ನಾಗ್ರಿಜುಲಿ, ಮಾ. 5- ಭಾರತ ಮತ್ತು ಭೂತಾನದ ಗಡಿಯಲ್ಲಿ 18 ಕಿ.ಮೀ. ಉದ್ದಕ್ಕೆ ಸೌರ ಬೇಲಿಯನ್ನು ಅಳವಡಿಸುವ ಮೂಲಕ ಈ ಮಾರ್ಗದಲ್ಲಿರುವ 11 ಗ್ರಾಮಗಳ ಹತ್ತು ಸಾವಿರಕ್ಕೂ ಹೆಚ್ಚು ಜನರನ್ನು ಆನೆಗಳಿಂದ ರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಬೊರ್ನಾಡಿ ನದಿಯ ದಂಡೆಯಲ್ಲಿ ಈ ತಡೆಗಳನ್ನು ಅಳವಡಿಸಲಾಗಿದೆ. ಈ ಮಾರ್ಗದಲ್ಲಿ ಆನೆಗಳು ಗ್ರಾಮಗಳಿಗೆ ನುಗ್ಗಿ ಸಾವುಗಳಿಗೆ ಕಾರಣವಾಗುತ್ತಿದ್ದವು. ಆನೆಗಳು ಈ ಹಿಂದೆ ದೊಡ್ಡ ಪ್ರಮಾಣದಲ್ಲಿ ಹಾನಿ ಮಾಡುತ್ತಿದ್ದವು. ಆರೇಳು ಜನರು ಪ್ರತಿ ವರ್ಷ ಆನೆಗಳಿಗೆ ಸಿಲುಕಿ ಸಾವನ್ನಪ್ಪುತ್ತಿದ್ದರು. ಭೂತಾನದಿಂದ ಆಹಾರ ಅರಸಿ ಬರುವ ಆನೆಗಳ ಹಾವಳಿಯಿಂದ ನಾವು ನಿದ್ದೆ ಮಾಡುವುದೇ ಕಷ್ಟವಾಗಿತ್ತು. ಜನರು ಸಂಜೆಯಾದ ನಂತರ ಮನೆಯಿಂದ ಹೊರ ಬರುತ್ತಿರಲಿಲ್ಲ ಎಂದು ಪುಬ್ ಗೌಬಾರಿ ಹಳ್ಳಿಯ ನಿವಾಸಿ ಭೀಮ್ ಬಹದ್ದೂರ್ ಛೇತ್ರಿ ಹೇಳಿದ್ದಾರೆ.

ಈ ಬಗ್ಗೆ ಅರಣ್ಯ ಸಂರಕ್ಷಕರು ಹಾಗೂ ಅಧಿಕಾರಿಗಳು ಗಂಭೀರ ಚರ್ಚೆ ನಡೆಸಿದ ನಂತರ, ಸೌರ ಬೇಲಿ ಅಳವಡಿಕೆಯ ನಿರ್ಧಾರ ತೆಗೆದುಕೊಂಡರು. ಈ ಬೇಲಿಗಳನ್ನು ಮಟ್ಟುವ ಆನೆಗಳಿಗೆ ಲಘು ಪ್ರಮಾಣದ ಷಾಕ್ ಆಗುತ್ತದೆ. ಇದು ಮಾರಣಾಂತಿಕವಲ್ಲ.

ಭಾರತೀಯ ಆನೆ ಪ್ರತಿಷ್ಠಾನದ ನಿಧಿಯಿಂದ ಸೌರ ಬೇಲಿಯನ್ನು ಅಳವಡಿಸಲಾಗಿದೆ. ಅರಣ್ಯ ಇಲಾಖೆ ಈ ಬೇಲಿ ಅಳವಡಿಕೆ ಕಾರ್ಯ ಪೂರೈಸಿದೆ. ಆನೆಗಳ ವಸತಿ ಪ್ರದೇಶ ಕಡಿಮೆಯಾಗುತ್ತಿರುವ ಕಾರಣ ಅವುಗಳು ಮನುಷ್ಯರ ನೆಲೆಗಳಿಗೆ ಆಹಾರ ಹುಡುಕಿಕೊಂಡು ಬರುತ್ತಿವೆ. ಇದು ಆನೆ ಹಾಗೂ ಮನುಷ್ಯರ ನಡುವೆ ಸಂಘರ್ಷಕ್ಕೆ ಕಾರಣವಾಗುತ್ತಿದೆ ಎಂದು ಹಿರಿಯ ಅಧಿಕಾರಿ ಅಂಜನ್ ಬರುವಾ ಹೇಳಿದ್ದಾರೆ.

ಈ ಹಿಂದೆ ಜನರು ವಿದ್ಯುತ್ ಬೇಲಿ ಅಳವಡಿಸುತ್ತಿದ್ದರು. ಇದು ಆನೆಗಳಿಗಷ್ಟೇ ಅಲ್ಲದೇ, ಮನುಷ್ಯರಿಗೂ ಅಪಾಯ ತರುತ್ತಿತ್ತು. ಈ ಹಿನ್ನೆಲೆಯಲ್ಲಿ ಸೌರ ಬೇಲಿ ಅಳವಡಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಗ್ರಾಮಸ್ಥರೂ ಈ ಬೇಲಿ ನಿರ್ವಹಣೆ ಕಾರ್ಯದಲ್ಲಿ ಕೈ ಜೋಡಿಸಿದ್ದಾರೆ. ಬೇಲಿ ನಿರ್ವಹಣೆಗೆ ಐದು ಸಮಿತಿಗಳನ್ನು ರಚಿಸಲಾಗಿದೆ. ಬೇಲಿ ಅಳವಡಿಕೆ ನಂತರ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ ಎಂದು ಗ್ರಾಮಸ್ಥರಾದ ನಿರ್ಮಲ್ ಹಜೊಂಗ್ ತಿಳಿಸಿದ್ದಾರೆ.

## ಗ್ಯಾಸ್ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ರ‍್ಯಾಲಿ



**ಹರಿಹರ**

ಹರಿಹರ, ಮಾ. 5 – ಕೇಂದ್ರ ಸರ್ಕಾರ ಗ್ಯಾಸ್ ಬೆಲೆ ಹೆಚ್ಚಿಸಿದ್ದರ ವಿರುದ್ಧ ಶಾಸಕ ಎಸ್. ರಾಮಪ್ಪ ನೇತೃತ್ವದಲ್ಲಿ ಕಾಂಗ್ರೆಸ್‌ನಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ತಹಶೀಲ್ದಾರ್ ಶಶಿಧರಯ್ಯನವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಶಾಸಕ ರಾಮಪ್ಪ, ಬಿಜೆಪಿ ಸರ್ಕಾರವು ಅಡುಗೆ ಅನಿಲ ಹಾಗೂ ಪೆಟ್ರೋಲ್, ಡೀಸೆಲ್ ದರವನ್ನು ಹೆಚ್ಚು ಮಾಡುತ್ತಿರುವುದರಿಂದ ಜನ ಸಾಮಾನ್ಯರು ಬದುಕನ್ನು ಕಟ್ಟಿಕೊಳ್ಳುವುದು ದುಸ್ತರವಾಗುತ್ತಿದೆ. ಕಚ್ಚಾ ತೈಲದ ಬೆಲೆ ಕುಸಿದಿದ್ದರೂ ಅನಿಲ ದರ ಏರಿಕೆ ಮಾಡಲಾಗಿದೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಎಸ್.ಎಂ. ವಸಂತ್, ಅಬ್ದುಲ್ ಅಲಿಂ, ನಗರಸಭೆ ಮಾಜಿ ಸದಸ್ಯರಾದ ಬಿ.ಕೆ. ಸೈಯದ್ ರೆಹಮಾನ್, ಏಜಾಜ್ ಆಹ್ಮದ್, ಮುಖಂಡರಾದ ಸುರೇಶ್ ಹಾದಿಮನಿ, ಮಹಮ್ಮದ್ ಫೈರೋಜ್, ಭಾಗ್ಯಮ್ಮನೇತ್ರಾವತಿ, ವಿದ್ಯಾ, ಕೆ.ಪಿ. ಗಂಗಾಧರ ಮಲೇಬೆನ್ನೂರು, ಹಬೀಬ್, ಹನುಮಂತಪ್ಪ, ಅಬಿದಾಲಿ ಮತ್ತಿತರರು ಹಾಜರಿದ್ದರು.

## ಉಪಸಭಾಧ್ಯಕ್ಷರ ಹುದ್ದೆ ಖಾಲಿ ಸಂವಿಧಾನ ಬಾಹಿರ: ಕಾಂಗ್ರೆಸ್

ನವದೆಹಲಿ, ಮಾ. 5 – ಲೋಕಸಭೆಯಲ್ಲಿ ನಾಲ್ಕು ವರ್ಷಗಳಿಂದ ಉಪಸಭಾಧ್ಯಕ್ಷರು ಇಲ್ಲದಿರುವುದಕ್ಕೆ ಆಕ್ಷೇಪಿ ಸಿರುವ ಕಾಂಗ್ರೆಸ್, ಇದು ಸಂವಿಧಾನ ಬಾಹಿರ ಎಂದು ಹೇಳಿದೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಉಪಸಭಾಧ್ಯಕ್ಷರ ಸ್ಥಾನ ಖಾಲಿ ಇರುವ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಬಗ್ಗೆ ಕೇಂದ್ರ ಉತ್ತರಿಸುವಂತೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ. ನಾಲ್ಕು ವರ್ಷಗಳಿಂದ ಉಪಸಭಾಧ್ಯಕ್ಷರಿಲ್ಲ. ಇದು ಸಂವಿಧಾನ ಬಾಹಿರ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಸಾಂಪ್ರದಾಯಿಕವಾಗಿ ಉಪಸಭಾಧ್ಯಕ್ಷರ ಸ್ಥಾನವನ್ನು ಪ್ರತಿಪಕ್ಷಗಳಿಗೆ ನೀಡಲಾಗುತ್ತದೆ. ಇದು ಜೂನ್ 23, 2019ರಿಂದ ಖಾಲಿ ಇದೆ.





## ದೈವಜ್ಞ ದಿವ್ಯ ಜ್ಯೋತಿ ಮಿತ್ರ ಮಂಡಳಿಯಿಂದ ಉಪನಯನ

ದಾವಣಗೆರೆ, ಮಾ. 5- ದೈವಜ್ಞ ದಿವ್ಯ ಜ್ಯೋತಿ ಮಿತ್ರ ಮಂಡಳಿಯಿಂದ ಸಾಮೂಹಿಕ ಉಪನಯನ ಮತ್ತು ವಿವಾಹ ಕಾರ್ಯಕ್ರಮವನ್ನು ಮೇ 11ರಂದು ನಗರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿಯ ಗೌರವಾಧ್ಯಕ್ಷ ಗುರುನಾಥ ಡಿ.ಪಾಲನಕರ್ ತಿಳಿಸಿದ್ದಾರೆ.

ವಿವರಕ್ಕೆ ಮೇ 1ರೊಳಗಾಗಿ ಹೆಚ್.ಜಿ. ಹನುಮಂತ ರಾವ್ ಪಾಲನಕರ್ (7899881161), ಗುರುನಾಥ ಡಿ. ಪಾಲನಕರ್ (7019 527392) ಇವರನ್ನು ಸಂಪರ್ಕಿಸಲು ಪತ್ರಿಕಾಗೋಷ್ಠಿಯಲ್ಲಿ ಕೋರಿದ್ದಾರೆ.

ಹೆಚ್.ಜಿ. ಹನುಮಂತರಾವ್ ಪಾಲನಕರ್, ವಿಮಲೇಶ್ವರ ಜಿ. ರೇವಣಕರ್, ಮೂರ್ತಿ ಜಿ.ಕುಡತರಕರ್, ರಾಘವೇಂದ್ರ ಎ.ವೆರ್ಣೇಕರ್ ಪತ್ರಿಕಾಗೋಷ್ಠಿಯಲ್ಲಿದ್ದರು.

**ಸೈಟುಗಳು ಮಾರಾಟಕ್ಕಿವೆ**
ಉತ್ತರ 30x50 ನಿಜಲಿಂಗಪ್ಪ ಬಡಾವಣೆ 15x65 ಅರಳಿಮರ ಸರ್ಕಲ್ (ಕಮರ್ಷಿಯಲ್) 30x57 ಹೊಸ ಆರ್‌ಟಿಓ ಆಫೀಸ್ ಎದುರು (ಕಮರ್ಷಿಯಲ್) 36x42 ನಿಟ್ಟುವಳ್ಳಿ ಮುಖ್ಯ ರಸ್ತೆ (ಕಮರ್ಷಿಯಲ್) 40x60ರಲ್ಲಿ ಒಟ್ಟು ಮೂರು ಮನೆಗಳು ಕೆ. ಹೆಚ್.ಬಿ ಹರಿಹರ ಮನೆಗಳು ಸೈಟು ಮಾರಾಟ ಖರೀದಿಗೆ ಸಂಪರ್ಕಿಸಿರಿ.
98440 15114, 83100 73553

**WANTED**
Service Engineer
ITI Electronics & Mechanic
Freshers can also apply.
Only Davangere Localates can contact:
ESSKAY TECHNOLOGY
98807 65334

**JOBS**
HR, Civil Engineer, Autocad Draftsman, Telecallers, CRM, Billing, sales, Graphic Designer, Office Manager, Marketing, Cashier, Digital Marketing
98444 92888

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
8749098879


**LADY TEACHERS WANTED FOR 2023-24**
NTC - 4 Posts , PUC - 4 Posts, Degree - 4 Posts,
Contact : Vidya Vikas Convent,
Behind Araike Hospital, Davangere.
Mob : 83109 32579

**ತುಳುನಾಡಿನ ಸ್ವಾಮಿ ಕೊರಗಜ್ಜ ಜ್ಯೋತಿಷ್ಯ ಫಲಂ**
ದಕ್ಷಿಣ ಕನ್ನಡ ಪದ್ಧತಿಯಲ್ಲಿ ಪರಿಹಾರ. ಇಂದೇ ಕರೆ ಮಾಡಿ. ಸಮಸ್ಯೆಗಳಾದ ಮನೆಯಲ್ಲಿ ಅಶಾಂತಿ, ಸಾಲಬಾಧೆ, ಉದ್ಯೋಗದಲ್ಲಿ ತೊಂದರೆ, ಸ್ತ್ರೀ ಪುರುಷ ವಶೀಕರಣ, ಲೈಂಗಿಕ ಸಮಸ್ಯೆ ಇನ್ನೂ ನಿಮ್ಮ ಹತ್ತಾರು ಸಮಸ್ಯೆಗಳಿಗೆ ಒಡನಬೈಲು ಪದ್ಮಾವತಿ ಪೂಜಾ ಶಕ್ತಿಯಿಂದ ಇಂದೇ ಪರಿಹಾರ.
ಪಂಡಿತ್ ಕುಡ್ಲಸಿದ್ಧಾಂತಿ
ಮೊ: 9008169579

ನೇತ್ರದಾನ - ಶ್ರೇಷ್ಠದಾನ

**EXCELLENT COACHING CENTER**
for 9th & 10th (CBSE, STATE)
Long term batches from 13th March, Mathematics, Science, Social, English (Lit, Gra)
Admissions Started, Join Immediately.
Study IQ Academy, Davanagere, Vidyanagara, M.C.C `A' Block.
89517 17444, 97402 15992

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ, ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ: 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969) ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

## ಅಮೆರಿಕನ್ ಏರ್‌ಲೈನ್ಸ್‌ನಲ್ಲಿ ಮೂತ್ರ ವಿಸರ್ಜನೆ ಪ್ರಕರಣ

ನವದೆಹಲಿ, ಮಾ. 5 – ಅಮೆರಿಕನ್ ಏರ್‌ಲೈನ್ಸ್‌ನ ನ್ಯೂಯಾರ್ಕ್‌ನಿಂದ ದೆಹಲಿಗೆ ಬರುವ ವಿಮಾನದಲ್ಲಿದ್ದ ಭಾರತದ ವಿದ್ಯಾರ್ಥಿಯೋರ್ವ, ಸಹ ಪ್ರಯಾಣಿಕನ ಮೇಲೆ ಮೂತ್ರ ವಿಸರ್ಜನೆ ಮಾಡಿದ ಘಟನೆ ನಡೆದಿದೆ ಎಂದು ದೆಹಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವಿಮಾನಯಾನ ಸಂಸ್ಥೆಯ ಸಿಬ್ಬಂದಿ ವೃತ್ತಿಪರವಾಗಿ ಪರಿಸ್ಥಿತಿ ನಿಭಾಯಿಸಿದ್ದು, ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ ಎಂದು ವೈಮಾನಿಕ ನಿಯಂತ್ರಕ ಡಿ.ಜಿ.ಸಿ.ಎ.ದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶನಿವಾರ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಎಎ292 ವಿಮಾನದಲ್ಲಿ ಈ ಘಟನೆ ನಡೆದಿದೆ. ಈ ವರ್ತನೆ ತೋರಿದ ಗ್ರಾಹಕನ ಬಗ್ಗೆ ದೆಹಲಿಗೆ ಬಂದ ತಕ್ಷಣ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಆರೋಪಿ ಅಮೆರಿಕ ವಿಶ್ವವಿದ್ಯಾನಿಲಯವೊಂದರ ವಿದ್ಯಾರ್ಥಿ. ಆತ ಪಾನಮತ್ತನಾಗಿದ್ದ. ನಿದ್ರೆಯಲ್ಲಿ ಮೂತ್ರ ವಿಸರ್ಜನೆ ಮಾಡಿದ್ದಾನೆ. ಇದು ಇನ್ನೋರ್ವ ಪ್ರಯಾಣಿಕನಿಗೂ ತಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿ ಈ ಘಟನೆಗಾಗಿ ಕ್ಷಮೆ ಯಾಚಿಸಿದ್ದಾನೆ. ವಿಷಯ ಪೊಲೀಸರಿಗೆ ತಿಳಿದರೆ ವಿದ್ಯಾರ್ಥಿಯ ಭವಿಷ್ಯದ ಮೇಲೆ ಪರಿಣಾಮವಾಗಬಹುದು ಎಂದು ಪ್ರಯಾಣಿಕ ಮೌನವಾಗಿದ್ದಾರೆ. ಆದರೆ, ಘಟನೆ ತಿಳಿದ ವಿಮಾನಯಾನ ಸಂಸ್ಥೆ ವಿಷಯವನ್ನು ವೈಮಾನಿಕ ನಿಯಂತ್ರಣ ಕೇಂದ್ರಕ್ಕೆ ತಿಳಿಸಿದೆ.

## ಕೊಡದಗುಡ್ಡ : ವೀರಭದ್ರೇಶ್ವರ ತೇರು

ಜಗಳೂರು ತಾಲ್ಲೂಕಿನ ಕೊಡದಗುಡ್ಡದಲ್ಲಿ ಇದೇ ದಿನಾಂಕ 8 ರ ಬುಧವಾರ ಸಂಜೆ 4.30 ಕ್ಕೆ ಶ್ರೀ ವೀರಭದ್ರೇಶ್ವರ ರಥೋತ್ಸವ ನಡೆಯಲಿದೆ.

ಇಂದು ಗಜವಾಹನೋತ್ಸವ, ನಾಳೆ ಮಂಗಳವಾರ ವೃಷಭ ವಾಹನೋತ್ಸವ, ದಿ. 8ರ ಬುಧವಾರ ಬೆಳಿಗ್ಗೆ 6 ಗಂಟೆಗೆ ಅಗ್ನಿಕುಂಡ ಮಹೋತ್ಸವ ಹಾಗೂ ಅದೇ ದಿನ ಸಾಯಂಕಾಲ 4.30 ಕ್ಕೆ ಮಹಾರಥೋತ್ಸವ ನಡೆಯುವುದು. ದಿನಾಂಕ 10 ರ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಓಕಳಿ ನಡೆಯುವುದು. ದಿನಾಂಕ 9 ಮತ್ತು 10 ರಂದು ಜಾತ್ರೆ ನಡೆಯುವುದು. ದಿನಾಂಕ 11 ರಿಂದ 20 ರವರೆಗೆ ಎತ್ತಿನ ಜಾತ್ರೆ ನಡೆಯಲಿದೆ.

## ಕಾಂಗ್ರೆಸ್‌ನಿಂದ ಸುಳ್ಳಿನ 'ಗ್ಯಾರಂಟಿ'

(1ನೇ ಪುಟದಿಂದ) ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಸಚಿವ ಆಚಾರ್ ಹಾಲಪ್ಪ, ಬಸಪ್ಪ, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಸಿ.ಬಿ. ರಿಷ್ಯಂತ್, ಜಿ.ಪಂ. ಸಿಇಒ ಎ. ಚನ್ನಪ್ಪ, ಪಾಲಿಕೆ ಆಯುಕ್ತೆ ರೇಣುಕಾ, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

**ಸೌಲಭ್ಯಗಳ ವಿತರಣೆ, ಪ್ರದರ್ಶನ ಮಳಿಗೆ :**

ಸಮ್ಮೇಳನದಲ್ಲಿ ಆಯ್ದ ಫಲಾನುಭವಿಗಳಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಸೌಲಭ್ಯಗಳನ್ನು ವಿತರಿಸಿದರು. ಸಮ್ಮೇಳನದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆ, ವಿಕಲಚೇತನ ಸೇರಿದಂತೆ ವಿವಿಧ ಇಲಾಖಾ ಫಲಾನುಭವಿಗಳು ಯೋಜನೆಗಳಿಂದ ತಮ್ಮ ಬದುಕಿನಲ್ಲಿ ಉಂಟಾದ ಬದಲಾವಣೆ ಕುರಿತಂತೆ ಅನಿಸಿಕೆ ಹಂಚಿಕೊಂಡರು. ಫಲಾನುಭವಿಗಳ ಜಾಗೃತಿಗಾಗಿ 60ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಿ ಸರ್ಕಾರದ ಯೋಜನೆಗಳ ಮಾಹಿತಿಯನ್ನು ನೀಡಲಾಯಿತು. ಈ ಸಮ್ಮೇಳನದಲ್ಲಿ 30 ಸಾವಿರದಷ್ಟು ಜನರು ಸೌಲಭ್ಯಗಳನ್ನು ಪಡೆದಿದ್ದಾರೆ ಎಂದು ಸಚಿವ ಜೋಷಿ ಹೇಳಿದರು.

# ಬಹಿರಂಗ ಅಧಿವೇಶನದಲ್ಲಿ ನಿರ್ಣಯ ಮಂಡನೆ

ಚನ್ನಗಿರಿ, ಮಾ. 5- ಹರನಹಳ್ಳಿ-ಕೆಂಗಾಪುರದಲ್ಲಿ ನಡೆದ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಆರು ನಿರ್ಣಯಗಳನ್ನು ಮಂಡಿಸಿದರು.



2023-24 ನೇ ಸಾಲಿನ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಈ ವರ್ಷವೇ ದಾವಣಗೆರೆಯಲ್ಲಿ ಮೂರನೇ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸುವುದಾಗಿ ಘೋಷಣೆ ಮಾಡಿರುವುದಕ್ಕೆ ಜಿಲ್ಲಾ ಕಸಾಪ ಹಾಗೂ ಜಿಲ್ಲೆಯ ಸಮಸ್ತ ಕನ್ನಡಾಭಿಮಾನಿ ಗಳ ವತಿಯಿಂದ ಅಭಿನಂದಿಸುವ ಮೂಲಕ ಈ ನಿಟ್ಟಿನಲ್ಲಿ ಶೀಘ್ರುವೇ ವಿಶೇಷ ಅಧಿಕಾರಿಯನ್ನು ನೇಮಿಸುವಂತೆ ಸರ್ಕಾರವನ್ನು ಸಮ್ಮೇಳನ ಆಗ್ರಹಿಸಿತು.

ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ಎಲ್ಲಾ ಹಂತಗಳ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ಮೂಲಕ ಕನ್ನಡ ಭಾಷೆಯನ್ನು ಅನ್ನದ ಭಾಷೆ ಯನ್ನಾಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ದಾವಣಗೆರೆ ಜಿಲ್ಲೆಯನ್ನು ಹಾಗೂ ವಿಶೇಷವಾಗಿ ಚನ್ನಗಿರಿ ತಾಲ್ಲೂಕನ್ನು ಪ್ರಮುಖ ಪ್ರವಾಸೋದ್ಯಮ ಕೇಂದ್ರವನ್ನಾಗಿ ಸುವ ನಿಟ್ಟಿನಲ್ಲಿ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ, ಸಂತೇಬೆನ್ನೂರಿನ ಪುಷ್ಕರಣಿ, ಕೆಳದಿ ಚನ್ನಮ್ಮ ಕೋಟೆ, ಹೊದಿಗೆರೆಯ ಷಹಜಿ ರಾಜೇ ಬೊಸ್ಲೆರವರ (ಶಿವಾಜಿ ಮಹಾರಾಜರ ತಂದೆ) ಸಮಾಧಿ ಸ್ಥಳ ಮುಂತಾದ ಸ್ಥಳಗಳು ಇನ್ನಷ್ಟು ಪ್ರವಾಸಿಗ ರನ್ನು ಆಕರ್ಷಿಸುವ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು. ಅದರಲ್ಲೂ ವಿಶೇಷ ವಾಗಿ ಸಂತೇಬೆನ್ನೂರಿನ ಪುಷ್ಕರಣಿಯಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರಿನ ಸೌಲಭ್ಯ, ಉದ್ಯಾನವನದ ಅಭಿವೃದ್ಧಿ ಮತ್ತು ಸಿಬ್ಬಂದಿ ಸಂಖ್ಯೆ ಹೆಚ್ಚಿಸುವ ಕೆಲಸವಾಗಬೇಕು.

ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸುಸಜ್ಜಿತ ಕನ್ನಡ ಭವನ ನಿರ್ಮಿಸಲು ಅಗತ್ಯ ಸಹಕಾರ ಮತ್ತು ಅನುದಾನ ನೀಡಬೇಕು.

ದಾವಣಗೆರೆ ಜಿಲ್ಲೆಯಾಗಿ 25 ಸಂವತ್ಸರಗಳನ್ನು ಪೂರೈಸಿ ರಜತ ಸಂಭ್ರಮದಲ್ಲಿರುವ ಈ ಸಮಯದಲ್ಲಿ ಜಿಲ್ಲೆಯ ಎಲ್ಲಾ ಹಿರಿಯ, ಕಿರಿಯ ಸಾಹಿತಿಗಳನ್ನು ಒಳಗೊಂಡ ವಿಶೇಷ ಸಾಹಿತ್ಯ ಕಾರ್ಯಕ್ರಮವನ್ನು ಜಿಲ್ಲಾಡಳಿತವು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಆಯೋಜಿಸಿ ಜಿಲ್ಲೆಯ ಕನ್ನಡದ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ ಮಾಡಬೇಕು.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ನಿರ್ಣಯ ಮಂಡಿಸಿದರು. ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಗೌರವ ಕಾರ್ಯದರ್ಶಿ ರೇವಣಸಿದ್ಧಪ್ಪ ಅಂಗಡಿ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಜಗದೀಶ್ ಕೂಲಂಬಿ, ಸಹ ಕಾರ್ಯದರ್ಶಿ ಕೆ.ಎಸ್. ವೀರೇಶ ಪ್ರಸಾದ್, ತಾಲ್ಲೂಕು ಅಧ್ಯಕ್ಷರಾದ ಎ.ಜಿ. ಸುಮತಿ ಜಯ್ಯಪ್ಪ, ಎಲ್.ಜಿ. ಮಧುಕುಮಾರ್, ಡಿ.ಎಂ. ಹಾಲಾರಾಧ್ಯ, ಡಿ.ಎಂ. ಮಂಜುನಾಥಯ್ಯ, ಜಿ. ಮುರುಗೆಪ್ಪಗೌಡ, ಕೆ. ಸುಜಾತಮ್ಮ ಉಪಸ್ಥಿತರಿದ್ದರು. ಕೆ.ಎಸ್ ಪರಮೇಶ್ವರಪ್ಪ ದಾಗಿನಕಟ್ಟೆ ಸ್ವಾಗತಿಸಿದರು.

# ಮಹಿಳೆಯರಿಂದ 'ಸೀರೆ ಉಡುಗೆಯಲ್ಲಿ ನಡಿಗೆ' ಜಾಥಾ



ದಾವಣಗೆರೆ, ಮಾ. 5- ವನಿತಾ ಸಮಾಜದ ವಾರ್ಷಿಕೋತ್ಸವದ ಅಂಗವಾಗಿ ವನಿತಾ ಸಮಾಜದ ಅಂಗ ಸಂಸ್ಥೆಗಳಾದ ವೈದ್ಯ ವೇದಿಕೆ ಹಾಗೂ ವಿಹ ಪರಿಸರ ವೇದಿಕೆ ವತಿಯಿಂದ ಭಾನುವಾರ ಸಂಜೆ 'ಸೀರೆ ಉಡುಗೆಯಲ್ಲಿ ನಡಿಗೆ' ಜಾಥಾ ನಡೆಯಿತು.

ವನಿತಾ ಸಮಾಜದಲ್ಲಿ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರೂ, ಕಸ-ರಸ ಅಭಿಯಾನದ ರೂವಾರಿಗಳೂ ಆಗಿರುವ ಡಾ.ಶಾಂತಾಭಟ್, ನಡಿಗೆಯಿಂದ ಆರೋಗ್ಯದ ಮೇಲಾಗುವ ಪ್ರಯೋಜನಗಳು ಹಾಗೂ ಪರಿಸರಕ್ಕೆ ನಾವು ನೀಡುವ ಕೊಡುಗೆಗಳ ಬಗ್ಗೆ ವಿವರಿಸಿದರು.

ವನಿತಾ ಸಮಾಜದಿಂದ ಆರಂಭವಾದ ಜಾಥಾದಲ್ಲಿ 'ಪರಿಸರದ ನಾಶ ಮನುಕುಲದ ಸರ್ವನಾಶ', 'ನಡೆ ನಡೆ ನಡೆ ಬಿಪಿ ಶುಗರ್ ತಡೆ', 'ಪರಿಶುದ್ಧ ಗಾಳಿ ಆರೋಗ್ಯವಂತರಾಗಿ ಬಾಳಿ', 'ಪ್ರಕೃತಿಯ ರಕ್ಷಕ ಪರಿಸರದ ಮಾಲೀಕ', 'ಮಲಗುವವನು ರೋಗಿ ನಡೆಯುವವನು ಯೋಗಿ' ಮೊದಲಾದ ಘೋಷಣೆಗಳನ್ನು ಕೂಗಲಾಯಿತು.

ಮಾರ್ಗ ಮಧ್ಯೆ ಇದ್ದ ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ ಅವರ ನಿವಾಸಕ್ಕೆ ತೆರಳಿದಾಗ, ಅವರು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯ ಕೋರಿದರು. ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ವನಿತಾ ಸಮಾಜದ ಅಧ್ಯಕ್ಷೆ ಪದ್ಮ ಪ್ರಕಾಶ್, ನಳಿನಿ ಅಚ್ಯುತ್, ನಾಗರತ್ನ ಜಗದೀಶ್, ಡಾ.ಚೈತಾಲಿ, ಡಾ.ಪೂರ್ಣಿಮ, ಸೌಮ್ಯ ಸತೀಶ್ ಸೇರಿದಂತೆ ವನಿತಾ ಸಮಾಜ ಹಾಗೂ ಅಂಗ ಸಂಸ್ಥೆಗಳ ಪದಾಧಿಕಾರಿಗಳು ನಡಿಗೆಯಲ್ಲಿ ಪಾಲ್ಗೊಂಡಿದ್ದರು.

## ಆಲೂರಿನಲ್ಲಿ ನಾಳೆ ಉಚ್ಚಂಗೆಮ್ಮ ದೇವಿ ಜಾತ್ರೆ

ದಾವಣಗೆರೆ, ಮಾ.5- ತಾಲ್ಲೂಕಿನ ಆಲೂರು ಗ್ರಾಮದ ಶ್ರೀ ಉಚ್ಚಂಗೆಮ್ಮ ದೇವಿ ಜಾತ್ರೆ ನಾಡಿದ್ದು ದಿನಾಂಕ 7ರ ಮಂಗಳವಾರದಿಂದ 9 ರ ಗುರುವಾರದವರೆಗೆ ನಡೆಯಲಿದೆ.

ದಿ. 7 ರ ಮಂಗಳವಾರ, ದಿ. 8 ರ ಬುಧವಾರ ಹಾಗೂ 9 ರ ಗುರುವಾರ ಅಮ್ಮನವರ ಕಾರ್ಯಕ್ರಮಗಳು ಜರುಗುವವು.

ದಿನಾಂಕ 7 ರ ಸಂಜೆ 7 ಗಂಟೆಗೆ ಮೊರಾರ್ಜಿ ಮೆಲೋಡೀಸ್ (ದಾವಣಗೆರೆ) ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯುವುದು. ದಿನಾಂಕ 9 ರ ಗುರುವಾರ ಸಂಜೆ 7 ಕ್ಕೆ ತುಮಕೂರು ಜ್ಯೋತಿ ಆರ್ಕೆಸ್ಟ್ರಾ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯುವುದು. ದಿ. 10 ರ ಶುಕ್ರವಾರ ಮಧ್ಯಾಹ್ನ 3 ಕ್ಕೆ ಮಲ್ಲ ಯುದ್ಧದ ಕುಸ್ತಿಗಳು ಜರುಗಲಿದೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ವಿಶೇಷ ಪೂಜೆ

ದಾವಣಗೆರೆ, ಮಾ.5- ನಗರದ ದೇವರಾಜ ಅರಸು ಬಡಾವಣೆ 'ಎ'



ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು 7 ರ ಮಂಗಳವಾರ ಹೋಳಿ ಹುಣ್ಣಿಮೆ ಪ್ರಯುಕ್ತ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಶ್ರೀಮತಿ ರೂಪ ರವೀಂದ್ರ, ಸುವರ್ಣ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಖಾಸಗಿ ಬಸ್ ನಿಲ್ದಾಣ ಅವೈಜ್ಞಾನಿಕ: ಪ್ರತಿಭಟನೆ

ದಾವಣಗೆರೆ, ಮಾ.5 - ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾಗಿರುವ ನೂತನ ಖಾಸಗಿ ಬಸ್ ನಿಲ್ದಾಣವು ಅವೈಜ್ಞಾನಿಕವಾಗಿದೆ ಎಂದು ವಿರೋಧಿಸಿ ಜಿಲ್ಲಾಡಳಿತದ ವಿರುದ್ಧ ಸಿಪಿಐ ಜಿಲ್ಲಾ ಮಂಡಳಿ ವತಿಯಿಂದ ಭಾನುವಾರ ನೂತನ ಖಾಸಗಿ ಬಸ್ ನಿಲ್ದಾಣದ ಬಳಿ ಇಂದು ಪ್ರತಿಭಟನೆ ಮಾಡಲಾಯಿತು.



ಮಹಾನಗರದಲ್ಲಿ ನೂತನವಾಗಿ ನಿರ್ಮಿಸಿರುವ ಖಾಸಗಿ ಬಸ್ ನಿಲ್ದಾಣದಲ್ಲಿ 10 ಬಸ್‌ಗಳು ಕೂಡಾ ನಿಲ್ಲಲು ಅವಕಾಶವಿಲ್ಲದಷ್ಟು ಅವೈಜ್ಞಾನಿಕವಾಗಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ.

ನೂತನ ಬಸ್ ನಿಲ್ದಾಣಕ್ಕೆ ಪ್ರತಿದಿನ 100ಕ್ಕೂ ಹೆಚ್ಚು ಬಸ್‌ಗಳು ಬಂದು ಹೋಗುತ್ತವೆ. ಹಾಗಾಗಿ, ನವೀಕೃತಗೊಳಿಸಿ ನಿರ್ಮಿಸಿರುವ ನಿಲ್ದಾಣದಲ್ಲಿ ಜಾಗದ ಕೊರತೆ ಇದ್ದು, ಬಸ್ ನಿಲ್ದಾಣದ ಮುಂದೆ ಮುಖ್ಯ ರಸ್ತೆ ಇರುವುದರಿಂದ ಬಸ್‌ಗಳು ಒಳಹೋಗುವ ಹಾಗೂ ಹೊರಬರುವು ದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ಮತ್ತು ವಾಹನಗಳಿಗೆ ತೊಂದರೆಯಾಗುತ್ತದೆ ಎಂದರು.

ಬಸ್ ನಿಲ್ದಾಣ ನಿರ್ಮಾಣ ಸಂದರ್ಭದಲ್ಲಿ ರಸ್ತೆ ಕಡೆಗೆ ಸುಮಾರು 20 ಅಡಿ ಎತ್ತರದ ಜಿಂಕ್ ಶೀಟ್‌ಗಳನ್ನು ಅಡ್ಡಗಟ್ಟಿ ನಿರ್ಮಾಣ ಮಾಡಿದ್ದರಿಂದ ಒಳಗಡೆ ಯಾವ ರೀತಿ ಕಾಮಗಾರಿ ನಡೆಯುತ್ತಿದೆ ಎಂಬುದು ಸಾರ್ವಜನಿಕರಿಗೆ ತಿಳಿಯಲಿಲ್ಲ. ಆದ್ದರಿಂದ, ನವೀಕೃತ ಖಾಸಗಿ ಬಸ್ ನಿಲ್ದಾಣವನ್ನು ನಗರ ಸಾರಿಗೆ ಬಸ್ ನಿಲ್ದಾಣವನ್ನಾಗಿ ಪರಿವರ್ತಿಸಬೇಕು ಮತ್ತು ನಗರದ ಬೇರೊಂದು ಕಡೆ ಸೂಕ್ತ ಸ್ಥಳ ಗುರುತಿಸಿ ವಿಶಾಲವಾದ ಖಾಸಗಿ ಬಸ್ ನಿಲ್ದಾಣ ನಿರ್ಮಿಸಬೇಕೆಂದು ಒತ್ತಾಯಿಸಿದರು.

ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು, ಪ್ರತಿಭಟನೆಯಲ್ಲಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಸಹಕಾರ್ಯದರ್ಶಿ ಆವರಗೆರೆ ವಾಸು, ಐರಣಿ ಚಂದ್ರು, ಲಕ್ಷಣ.ವಿ, ಮೌನೇಶ ಚಾರ್, ಟಿ.ಎಸ್ ನಾಗರಾಜ, ಚಮನ್ ಸಾಬ್, ಕೃಷ್ಣಪ್ಪ, ಉಮಾಪತಿ, ಗದಿಗೇಶ್, ನರೇಗಾ ರಂಗನಾಥ್, ಏಳುಕೋಟಿ, ಬಸವರಾಜ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಕುಂಬಳೂರಿನಲ್ಲಿ ಹೆದ್ದಾರಿ ಕಾಮಗಾರಿಗೆ ಚಾಲನೆ



ಮಲೇಬೆನ್ನೂರು, ಮಾ. 5 - ಕುಂಬಳೂರು ಗ್ರಾಮದಿಂದ ನಿಟ್ಟೂರುವರೆಗಿನ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್. ರಾಮಪ್ಪ ಅವರು ಗುರುವಾರ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕರು, 3 ಕೋಟಿ ರೂ. ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿದೆ. ಜೊತೆಗೆ ತಾಲ್ಲೂಕಿನ ಅನೇಕ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡಲಾಗುವುದೆಂದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲೀಲಾ ಶಿವಕುಮಾರ್, ಉಪಾಧ್ಯಕ್ಷ ಎ.ಕೆ. ಹನುಮಂತಪ್ಪ, ಸದಸ್ಯರಾದ ಎನ್, ಕಲ್ಲೇಶ್, ಶ್ರೀಮತಿ ಉಮಾದೇವಿ ಶಿವರಾಮಚಂದ್ರಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿ.ಸಿ.ಸಿ. ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಕಿಲ್ ಕೊಂಡಜ್ಜಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್. ಹೆಚ್. ಬಸವರಾಜ್, ಹುಲ್ಲುಮನಿ ನಿಂಗಪ್ಪ, ವೈ. ಶ್ರೀನಿವಾಸ್, ಕೆ. ಸುಭಾಸ್‌ಚಂದ್ರ, ಎ.ಕೆ. ಕುಬೇರಪ್ಪ, ವೈ. ರಮೇಶ್, ಕಡೇಮನಿ ಪುಟ್ಟಪ್ಪ, ಬೆನ್ನೂರು ಕರಿಬಸಪ್ಪ, ಕೆ. ಕಾಮರಾಜ್, ಎಂ.ವಾಸು ದೇವಮೂರ್ತಿ, ಕೆ.ಎಸ್. ಆಂಜನೇಯ, ಕೆ. ತಿಮ್ಮಣ್ಣ, ನಾಗಣ್ಣ, ಕೆ.ಎಸ್. ಆಂಜನೇಯ, ನಿಟ್ಟೂರಿನ ಕೆ. ಏಕಾಂತಪ್ಪ, ಹುರುಳಿ ಹನುಮಂತಪ್ಪ , ಮಲೇಬೆನ್ನೂರಿನ ಭೋವಿಕುಮಾರ್ ಮಲ್ಲನಾಯ್ಕನಹಳ್ಳಿ ಶೇಖರಪ್ಪ, ಪಿಡಬ್ಲ್ಯೂಡಿ ಇಂಜಿನಿಯರ್ ಶಿವರುದ್ರಪ್ಪ, ಪಿಡಿಓ ಮೂರ್ತಿ, ಗುತ್ತಿಗೆದಾರ ರಮೇಶ್, ಈ ವೇಳೆ ಹಾಜರಿದ್ದರು.

## ಸುಳ್ಳಿನ 'ಗ್ಯಾರಂಟಿ'

**(1ನೇ ಪುಟದಿಂದ)** ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಸಚಿವ ಆಚಾರ್ ಹಾಲಪ್ಪ, ಬಸಪ್ಪ, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಉಪ ಮೇಯರ್ ಯಶೋಧ ಹೆಗ್ಗಪ್ಪ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಸಿ.ಬಿ. ರಿಷ್ಯಂತ್, ಜಿ.ಪಂ. ಸಿಇಒ ಎ. ಚನ್ನಪ್ಪ, ಪಾಲಿಕೆ ಆಯುಕ್ತೆ ರೇಣುಕಾ, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

**ಸೌಲಭ್ಯಗಳ ವಿತರಣೆ, ಪ್ರದರ್ಶನ ಮಳಿಗೆ :**

ಸಮ್ಮೇಳನದಲ್ಲಿ ಆಯ್ದ ಫಲಾನುಭವಿಗಳಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಸೌಲಭ್ಯಗಳನ್ನು ವಿತರಿಸಿದರು. ಸಮ್ಮೇಳನದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆ, ವಿಕಲಚೇತನ ಸೇರಿದಂತೆ ವಿವಿಧ ಇಲಾಖಾ ಫಲಾನುಭವಿಗಳು ಯೋಜನೆಗಳಿಂದ ತಮ್ಮ ಬದುಕಿನಲ್ಲಿ ಉಂಟಾದ ಬದಲಾವಣೆ ಕುರಿತಂತೆ ಅನಿಸಿಕೆ ಹಂಚಿಕೊಂಡರು. ಫಲಾನುಭವಿಗಳ ಜಾಗೃತಿಗಾಗಿ 60ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಿ ಸರ್ಕಾರದ ಯೋಜನೆಗಳ ಮಾಹಿತಿಯನ್ನು ನೀಡಲಾಯಿತು. ಈ ಸಮ್ಮೇಳನದಲ್ಲಿ 30 ಸಾವಿರದಷ್ಟು ಜನರು ಸೌಲಭ್ಯಗಳನ್ನು ಪಡೆದಿದ್ದಾರೆ ಎಂದು ಸಚಿವ ಜೋಷಿ ಹೇಳಿದರು.

## ನಗರಕ್ಕೆ ಇಂದು ರಣದೀಪ್ ಸಿಂಗ್ ಸುರ್ಜೇವಾಲಾ

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಇಂದು ಮಧ್ಯಾಹ್ನ 2 ಗಂಟೆಗೆ ಪಕ್ಷದ ಮುಖಂಡರು ಹಾಗೂ ಚುನಾವಣಾ ಆಕಾಂಕ್ಷಿಗಳ ಸಭೆಯನ್ನು ಎಂಬಿಎ ಆಡಿಟೋರಿಯಂ ನಲ್ಲಿ ನಡೆಸಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಚ್.ಬಿ ಮಂಜಪ್ಪ ವಹಿಸಿಕೊಳ್ಳಲಿದ್ದಾರೆ. ಸಭೆಯಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಉಪಸ್ಥಿತರಿರುವರು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್.ಕೆ ಶೆಟ್ಟಿ ತಿಳಿಸಿದ್ದಾರೆ.

## ಇರಾನ್‌ನ ಬಾಲಕಿಯರ ಶಾಲೆಗಳ ಮೇಲೆ ವಿಷ ದಾಳಿ ಉಲ್ಬಣ

ದುಬೈ, ಮಾ. 5 – ಇರಾನ್‌ನಲ್ಲಿ ವಿದ್ಯಾರ್ಥಿನಿಯರ ಶಾಲೆಗಳ ಮೇಲೆ ಶಂಕಿತ ರಾಸಾನಿಯಕ ವಿಷದ ದಾಳಿಗಳ ಪ್ರಕರಣ ಉಲ್ಬಣಿಸಿದ್ದು, 50ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದಾರೆ.

ಈ ವಿಷ ದಾಳಿಯ ಕಾರಣದಿಂದಾಗಿ ಪೋಷಕರಲ್ಲಿ ತೀವ್ರ ಆತಂಕ ಉಂಟಾಗಿದೆ. ಈ ದಾಳಿಗಳಿಗೆ ಕಾರಣ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕಳೆದ ನವೆಂಬರ್ ತಿಂಗಳಿನಿಂದ ಈ ದಾಳಿಗಳು ಆರಂಭವಾಗಿವೆ.

ಕೊಮ್ ಎಂಬ ನಗರದಲ್ಲಿ ಮೊದಲು ವಿಷ ಪ್ರಕರಣ ಕಂಡು ಬಂದಿತ್ತು. ನಂತರ ಇರಾನ್‌ನ 30 ಪ್ರಾಂತ್ಯಗಳ ಪೈಕಿ 21ರಲ್ಲಿ ಈ ಘಟನೆಗಳು ಕಂಡು ಬಂದಿವೆ. ಒಂದು ಶಾಲೆ ಹೊರತು ಪಡಿಸಿದರೆ, ದಾಳಿಗೆ ಗುರಿಯಾದ ಎಲ್ಲ ಶಾಲೆಗಳು ಬಾಲಕಿಯರವೇ ಆಗಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಇರಾನ್ ಗೃಹ ಸಚಿವ ಅಹಮದ್ ವಾಹಿದಿ, ಈ ಪ್ರಕರಣಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಸಾರ್ವಜನಿಕರು ಶಾಂತವಾಗಿರಬೇಕು. ಶತ್ರುಗಳು ಮಾಧ್ಯಮ ಉಗ್ರವಾದದ ಮೂಲಕ ಆತಂಕ ಹರಡುತ್ತಿದ್ದಾರೆ ಎಂದಿದ್ದಾರೆ.

ಆದರೆ, ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ವಿಷದ ಬಗ್ಗೆ ವರದಿಯಾಗುವವರೆಗೂ ಇರಾನ್, ಈ ದಾಳಿಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಕಳೆದ ಬುಧವಾರದಂದು ತನಿಖೆ ನಡೆಸುವುದಾಗಿ ಅಧ್ಯಕ್ಷ ಅಬ್ರಾಹಿಮ್ ರೈಸಿ ಘೋಷಿಸಿದ್ದರು.

52 ಶಾಲೆಗಳ ಮೇಲೆ ವಿಷದ ದಾಳಿಯ ಶಂಕೆ ವ್ಯಕ್ತವಾಗಿದೆ. ಜಾಲತಾಣಗಳಲ್ಲಿ ವಿಷದ ದಾಳಿಗೆ ಗುರಿಯಾದ ವಿದ್ಯಾರ್ಥಿನಿಯರ ದೃಶ್ಯಗಳು ವೈರಲ್ ಆಗಿವೆ. ವಿಷದ ದಾಳಿಯಿಂದ ಇದುವರೆಗೂ ಯಾವುದೇ ಸಾವು ಸಂಭವಿಸಿಲ್ಲ. ತಲೆ ನೋವು, ಎದೆ ನೋವು, ಬಳಲಿಕೆಯ ರೀತಿಯ ಲಕ್ಷಣಗಳು ಕಂಡು ಬಂದಿವೆ.

## ಗುರುಗುಂಟಾ ಶ್ರೀ ಅಮರೇಶ್ವರ ರಥೋತ್ಸವ

ದಾವಣಗೆರೆ, ಮಾ.5- ನಾಡಿದ್ದು ದಿನಾಂಕ 7ರ ಮಂಗಳವಾರ ಹೋಳಿ ಹುಣ್ಣಿಮೆಯಂದು ಲಿಂಗಸೂರು ತಾಲ್ಲೂಕಿನ ಸುಕ್ಷೇತ್ರ ಶ್ರೀ ಗುರುಗುಂಟಾ ಶ್ರೀ ಅಮರೇಶ್ವರ ಮಹಾರಥೋತ್ಸವ ಅಂದು ಸಾಯಂಕಾಲ ನಡೆಯಲಿದೆ.

TAPOVANA
MEDICAL COLLEGE & HOSPITAL OF NATUROPATHY & YOGIC SCIENCES
Affiliated to Rajiv Gandhi University of Health Sciences, Bengaluru, Recognised by The Government of Karnataka.

WANTED
- BNYS Doctors (for College & Hospital)
- Marketing/ HR Manager's (for College & Hospital)
- B.Sc Nursing (for College & Hospital)
- Diploma in Nursing (for Hospital)
- Retired Bank Employee's (for Account Section)

Needful Candidates may apply, send your CV / Resumes at
srishakthikarnataka@gmail.com, shakthi1992@yahoo.co.in.
WhatsApp: 9986408105.



Doddabathi-577566, Davangere Dist, Karnataka State, India.



# ಹರಿಹರದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ

ಹರಿಹರ, ಮಾ. 5 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಮಾಡಲಾಯಿತು. ಈ ವೇಳೆ ಶಾಸಕ ಎಸ್. ರಾಮಪ್ಪ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ರೇಣುಕಾಚಾರ್ಯರ ಕುರಿತು ಮಾತನಾಡಿದರು. ಈ ವೇಳೆ ತಹಶೀಲ್ದಾರ್ ಶಿಶಿಧರಯ್ಯ, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಸಮಾಳ ಚಂದ್ರಪ್ಪ, ಎನ್.ಇ. ಸುರೇಶ್ ಸ್ವಾಮಿ, ಬಸವರಾಜಯ್ಯ, ಕೆ.ಟಿ. ಪಂಚಾಕ್ಷರಿ, ಗುರು ಬಸವರಾಜ್, ಹಾಲಸ್ವಾಮಿ, ಜಿ.ವಿ. ಪ್ರವೀಣ್, ಕರಿಬಸಪ್ಪ ಕಂಚಿಕೇರಿ, ಸಿದ್ದಲಿಂಗ ಸ್ವಾಮಿ, ಮಂಜುನಾಥ್, ನಾಗರಾಜ್, ಶಶಿನಾಯ್ಕ್ ಮತ್ತಿತರರು ಹಾಜರಿದ್ದರು.

## ಸಾಹಿತ್ಯ, ಕಲೆಗಳಿಗೆ ಜಾತಿ ಇಲ್ಲ



**(1ನೇ ಪುಟದಿಂದ)** ವೀರೇಶ್ ಪ್ರಸಾದ್, ಎ.ಜಿ. ಸುಮತಿ ಜಯ್ಯಪ್ಪ, ಕೆ. ಸುಜಾತಮ್ಮ ಜಿ. ಮುರುಗೆಪ್ಪ ಗೌಡ, ಡಿ.ಎಂ. ಮಂಜುನಾಥಯ್ಯ ಮತ್ತಿತರರು ಉಪಸ್ಥಿತರಿದ್ದರು. ಕಸಾಪ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ ಕೂಲಂಬಿ ನಿರೂಪಿಸಿದರು. ಜಿಲ್ಲಾ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ರೇವಣಸಿದ್ಧಪ್ಪ ಅಂಗಡಿ ವಂದಿಸಿದರು.

## ಇಂದು ಸಂಸದರ ಕಾರ್ಯಕ್ರಮ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ಕ್ಕೆ ದಾವಣಗೆರೆ ಸ್ಮಾರ್ಟ್ ಸಿಟಿ ಕಛೇರಿ ಸಭಾಂಗಣದಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ನಗರ ಮಟ್ಟದ ಸಲಹಾ ಸಮಿತಿ ಸಭೆ ನಡೆಸಲಿ ದ್ದಾರೆ. ಮಧ್ಯಾಹ್ನ 1 ಕ್ಕೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿ ಸಭಾಂಗಣದಲ್ಲಿ ಜಲಸಿರಿ ಕುಡಿಯುವ ನೀರಿನ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.

## ಕುಂಬಳೂರಿನಲ್ಲಿ ಇಂದು

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವವು ಇದೇ ದಿನಾಂಕ 9ರ ಗುರುವಾರ ಜರುಗಲಿದ್ದು, ಇಂದು ರಾತ್ರಿ 9.30ಕ್ಕೆ ಗಿಣಿ ಉತ್ಸವ, ಮಂಗಳ ವಾರ ರಾತ್ರಿ 9.30ಕ್ಕೆ ಚಿಗರಿ ಉತ್ಸವ ನಡೆಯಲಿದೆ.

ವಿದೇಶ ಪ್ರವಾಸದ ಶುಭ ಹಾರೈಕೆಗಳು

ಹೆಚ್. ಚಂದ್ರಪ್ಪ ಕಿರಿಗೇರಿ
ಮತ್ತು
ಶ್ರೀಮತಿ ಸಿ. ವಿಜಯಲಕ್ಷ್ಮಿ

ಇವರು ದಿನಾಂಕ 6.03.2023ರಂದು ಬೆಂಗಳೂರಿನಿಂದ ಅಮೇರಿಕದ ಸೆಂಟ್ ಲೂಯಿಸ್ ನಗರಕ್ಕೆ ತೆರಳುತ್ತಿದ್ದಾರೆ. ಇವರ ಪ್ರಯಾಣವು ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ.



- ಸಿದ್ದಣ್ಣ ವಿನಾಯಕ ರೈಸ್ ಮಿಲ್
- ಬೀಡಾ ಪ್ರಕಾಶ್
- ಅನಂತಪ್ಪ ಹೆಚ್. ಮಾರುತಿ ಪ್ರಾವಿಜನ್ ಸ್ಟೀಲ್
- ಕಿತ್ತೂರು ಜಯ್ಯಣ್ಣ
- ಉಮೇಶಣ್ಣ, ಗಣೇಶ್ ಹೋಟೆಲ್
- ಜೆ.ಕೆ.ಎಂ. ಮಹೇಶ್
- ಜೆ.ಕೆ.ಎಂ. ಬಕ್ಕಣ್ಣ
- ಕಂಠೇಪ್ಪರು
- ಕೋಟೆಪ್ಪ ಸೇಂಗಾ ಮಿಲ್
- ನಾಗೇಂದ್ರರಾವ್ ಎಸ್.ಎಸ್.
- ರಾಜಣ್ಣ ತಳದಾರ್
- ರಮೇಶ್ (ಟೈಲ್ಸ್)
- ಪ್ರಕಾಶ್ ಕೆಫೆ
- ಡಿ.ಡಿ. ಕಿಟ್ಟಣ್ಣರ್
- ಮಿಲಿಟರಿ ಮಂಜಣ್ಣ
- ಕಾರ್ ಮಲ್ಲಣ್ಣ
- ಪ್ರಭಣ್ಣ ಬೇತೂರು
- ಮಾಗಿ ಪ್ರಕಾಶ್ (ರೈಸ್ ಕಾರ್ನರ್)
- ಬಾಬು ಮಾಗಿ (ರೈಸ್ ಕಾರ್ನರ್)
- ರಾಮಣ್ಣ ಹಿಟ್ಟಿನ ಗಿರಣಿ
- ಪ್ರಶಾಂತ್, ಡಾ.ಸಿ.ವಿ ರಾಮನ್ ಕಾಲೇಜ್
- ಸತೀಶ್ ಶೆಟ್ಟಿ ಬೆಂಗಳೂರು
- ನಾಗಣ್ಣ ಕರೂರು ಮಿಲ್
- ಜಗದೀಶ್ ಬಿ.ಪಿ.ಎಂ.
- ಪರಶುರಾಮ ಅಕ್ಕಿ ಬ್ರೋಕರ್
- ಆನಂದ್ .ಬಿ
- ಕರೇಶಿವಪ್ಪ ಮಂಜುನಾಥ
- ಕುಮಾರ ಸ್ವಾಮಿ ಹಿರೇತೋಗಲೇರಿ

ಜನ್ಮದಿನದ ಶುಭಾಶಯಗಳು



ದಾವಣಗೆರೆ
ಮಹಾನಗರ ಪಾಲಿಕೆ ಸದಸ್ಯರಾದ
ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ
ಅವರಿಗೆ ಜನ್ಮದಿನದ ಶುಭಾಶಯಗಳು.

ಮಂಜು ಜಿ.ಸಿ.
ಗುತ್ತಿಗೆದಾರರು
ಅಣಜಿ ಗೊಲ್ಲರಹಳ್ಳಿ.
ಕಾಂಗ್ರೆಸ್ ಯುವ ಮುಖಂಡರು
ಮಾಯಕೊಂಡ ವಿಧಾನಸಭಾ ಕ್ಷೇತ್ರ

ಶ್ರೀಮತಿ ಸುಧಾ ಬಂದೋಳ್ ಅವಿನಾಶ್
ಕಾಂಗ್ರೆಸ್ ಮುಖಂಡರು
32ನೇ ವಾರ್ಡ್ ಎಲ್ಲಾ ನಾಗರಿಕ ಬಂಧುಗಳು
ಚಿಕ್ಕನಹಳ್ಳಿ ಬಡಾವಣೆ, ನಿಟುವಳ್ಳಿ ದಾವಣಗೆರೆ.

## ಜಿಗಳಿ ರಂಗನಾಥ ಸ್ವಾಮಿಯ ಉಚ್ಛಾಯ



ಮಲೇಬೆನ್ನೂರು, ಮಾ. 5 - ಜಿಗಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಅಂಗವಾಗಿ ಸ್ವಾಮಿಯ ಉಚ್ಛಾಯ ಭಾನುವಾರ ಬೆಳಗ್ಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ಸಂಜೆ ಶಸ್ತ್ರ ಕಾರ್ಯಕ್ರಮಗಳು ನಡೆದವು.

ಇದೇ ದಿನ ತಡರಾತ್ರಿ (ಸೋಮವಾರ ಬೆಳಗಿನ ಜಾವ) ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಶ್ರೀ ಬೀರಲಿಂಗೇಶ್ವರ ಸ್ವಾಮಿ, ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ, ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ ಒಡಗೂಡಿ ಸಕಲ ಬಿರುದಾವಳಿಗಳಿಂದ ಬ್ರಾಹ್ಮೀ ಮುಹೂರ್ತದಲ್ಲಿ ಜರುಗಿತು.

ನಾಳೆ ಸೋಮವಾರ ಬೆಳಿಗ್ಗೆ 10.30 ರಿಂದ ಜವಳ, ಮುದ್ರೆ ಮತ್ತು ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು.

ದಿನಾಂಕ 7 ರ ಮಂಗಳವಾರ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ರಿಂದ ಶ್ರೀ ರಂಗನಾಥಸ್ವಾಮಿ, ಶ್ರೀ ಬೀರಲಿಂಗೇಶ್ವರ ಸ್ವಾಮಿ, ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ದೇವರುಗಳ ಭೂತನ ಸೇವೆ ನಡೆಯುವುದು ಮತ್ತು ರಾಜಬೀದಿಗಳಲ್ಲಿ ವಿವಿಧ ವಾದ್ಯಗಳೊಂದಿಗೆ ಉತ್ಸವ ನಡೆಯಲಿದೆ. ದಿನಾಂಕ 10 ರ ಶುಕ್ರವಾರ ಚೌಡಮ್ಮ ದೇವಿಯ ಹಬ್ಬವಿರುತ್ತದೆ. **ಅನ್ನ ಸಂತರ್ಪಣೆ :** ರಥೋತ್ಸವ ಪ್ರಯುಕ್ತ ನಾಳೆ ಸೋಮವಾರ ಇಡೀ ದಿನ ಗ್ರಾಮಸ್ಥರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಪ್ರಮುಖರಾದ ಗೌಡ್ರ ಬಸವರಾಜಪ್ಪ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಶಾಬಾನ ಹಬ್ಬ


ದಾವಣಗೆರೆ, ಮಾ. 5-ತಂಜೀಮುಲ್-ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ವತಿಯಿಂದ ನಾಡಿದ್ದು ದಿನಾಂಕ 7 ರಂದು ಮಂಗಳವಾರ ರಾತ್ರಿ ಮುಸ್ಲಿಮರ ಪವಿತ್ರ ಹಬ್ಬವಾದ ಶಾಬಾನ ( ಶಬ್ -ಎ- ಬಾರಾತ್) ಹಬ್ಬವನ್ನು ಆಚರಿಸಲಾಗುವುದು. ಅಂದು ರಾತ್ರಿ ನಗರಾದ್ಯಂತ ಇರುವ ಎಲ್ಲಾ ಮಸ್ಜಿದ್‌ಗಳಲ್ಲಿ ಮುಸ್ಲಿಂ ಬಾಂಧವರಿಂದ ವಿಶೇಷ ಪ್ರಾರ್ಥನೆ ಸಲ್ಲಿಸಲಾಗುವುದು. ಧರ್ಮ ಗುರುಗಳು ಪ್ರವಚನ ಮಾಡುವರು. ನಂತರ ಓದಿಕೆಯನ್ನು ಮಾಡಲಾಗುವುದು. ತದನಂತರ ಸಮಾಜ ಬಾಂಧವರು ಪಿ. ಬಿ. ರಸ್ತೆಯಲ್ಲಿರುವ ಖಬರಸ್ತಾನ ಮತ್ತು ಮಾಗಾನಹಳ್ಳಿ ರಸ್ತೆ ರಜಾವುಲ್ ಮುಸ್ತಫಾ ನಗರ ದಲ್ಲಿರುವ ಖಬರಸ್ತಾನ ಮತ್ತು ಇಂಡಸ್ಟ್ರೀಯಲ್ ಏರಿಯಾದ ರಾಮನಗರದಲ್ಲಿರುವ ಖಬರ ಸ್ತಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುವರು ಎಂದು ಅಸೋಸಿ ಯೇಷನ್ ಅಧ್ಯಕ್ಷ ಶೇಖ್ ದಾದಾ ಪೀರ್ ಸಾಬ್, ಕಾರ್ಯದರ್ಶಿ ಷಾನವಾಜ್ ಖಾನ್ ತಿಳಿಸಿದ್ದಾರೆ.

## ಆನೆಕೊಂಡದಲ್ಲಿ ನಾಳೆ ರಥೋತ್ಸವ



ದಾವಣಗೆರೆ, ಮಾ.5- ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 7ರ ಮಂಗಳವಾರ ರಾತ್ರಿ 10 ಗಂಟೆಗೆ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಸಾಮೂಹಿಕ ಶ್ರೀ ಗಾಯತ್ರಿ ದೇವಿ ಪೂಜೆ



ದಾವಣಗೆರೆ, ಮಾ.5- ನಗರದ ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆ ಹೋಳಿ ಹುಣ್ಣಿಮೆ ಅಂಗವಾಗಿ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಾಡಿದ್ದು ದಿನಾಂಕ 7 ರ ಮಂಗಳವಾರ ಬೆಳಿಗ್ಗೆ 7 ಗಂಟೆಗೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ.ಸುಶೀಲಮ್ಮ ತಿಳಿಸಿದ್ದಾರೆ ಪುರುಷೋತ್ತಮ ಪಟೇಲ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## 'ದಾವಣಗೆರೆ ಗೃಹಿಣಿ' ಸ್ಪರ್ಧೆ ಅವಧಿ ವಿಸ್ತರಣೆ

ದಾವಣಗೆರೆ, ಮಾ.5- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾದ 'ದಾವಣಗೆರೆಯ ಗೃಹಿಣಿ ಸ್ಪರ್ಧೆ-2023' ಹೆಸರು ನೋಂದಾಯಿಸುವ ಕೊನೆಯ ದಿನಾಂಕವನ್ನು ಇದೇ ದಿನಾಂಕ 15ರವರೆಗೆ ವಿಸ್ತರಿಸಲಾಗಿದೆ ಎಂದು ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್‌ಶಣೈ ತಿಳಿಸಿದ್ದಾರೆ. ವಿವರಕ್ಕೆ 9538732777, 9743 897578, 83174 27179, 9844691391ಕ್ಕೆ ಸಂಪರ್ಕಿಸುವಂತೆ ಸಂಸ್ಥೆಯ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.


# ಹೃದಯ ಪೂರ್ವಕ ಅಭಿನಂದನೆಗಳು

ಹಳೇಕುಂದುವಾಡ ಜಂಗಪ್ಪರ ಮಲ್ಲಪ್ಪ ಮೇಸ್ತ್ರು ಇವರ ಮೊಮ್ಮಗ
ಜೆ.ಎಂ. ಬಸವರಾಜ್ ಮತ್ತು ಲಕ್ಷ್ಮಿದೇವಿ ಇವರ ಪುತ್ರ

**ಜೆ.ಬಿ ಸಾಗರ್ MA.,B.Ed**



ಇವರು, ದಾವಣಗೆರೆ ಜಿಲ್ಲೆ ಹಾಗೂ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವದಲ್ಲಿ ಕರ್ನಾಟಕ ಸರ್ಕಾರದ ರಾಜ್ಯಪಾಲರಾದ ತಾವರ್ ಚಂದ್ ಗೆಹ್ಲೋಟ್ ಇವರಿಂದ 4 ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕ ಪಡೆದಿರುತ್ತಾರೆ. (ಸ್ನಾತಕೊತ್ತರ ಪದವಿಯಲ್ಲಿ)

ಇವರಿಗೆ ಅಭಿನಂದನೆ ತಿಳಿಸುವವರು

ದೊಡ್ಡಪ್ಪ : ✤ಜೆ.ಎಂ. ಚಂದ್ರಶೇಖರಪ್ಪ ವಿಶ್ರಾಂತ ಮುಖ್ಯೋಪಾಧ್ಯಾಯರು ಮತ್ತು ಮಕ್ಕಳು, ಸೊಸೆಯಂದಿರು.
✤ಕಾಂ॥ ಜೆ.ಎಂ. ಹನುಮಂತಪ್ಪ ನಗರ ಪಾಲಿಕೆ ಮಾಜಿ ಸದಸ್ಯರು ಮತ್ತು ಮಕ್ಕಳು
✤ಜೆ.ಎಂ. ರಾಜಶೇಖರ್ ಮತ್ತು ಡಿ.ಜಿ ಗೌರಮ್ಮ ಮತ್ತು ಮಕ್ಕಳು, ಸೊಸೆಯಂದಿರು,
✤ಡಿ.ಜಿ. ಶಿವಮ್ಮ ಮತ್ತು ಮಕ್ಕಳು, ಸೊಸೆಯಂದಿರು.,
✤ಡಿ.ಜಿ. ರೇಣುಕಮ್ಮ ಮತ್ತು, ಮಕ್ಕಳು (ಅನುಸೂಯಮ್ಮ ಆಂಜನೇಯ ಸ್ವಾಮಿ ಮತ್ತು ಮಕ್ಕಳು, ಮದ್ರಳ್ಳಿ)
✤ಜೆ.ಸಿ. ಪಾರ್ವತಿ ಕಿಶೋರ್, ಗೆಜ್ಜೆಹಳ್ಳಿ, ಹುಬ್ಬಳ್ಳಿ. ✤ಜೆ.ಹೆಚ್. ದಿವ್ಯಶ್ರೀ ಮತ್ತು ಜೈ ಪ್ರಕಾಶ್, ತಿರುಪತಿ.
✤ನರಸಪ್ಪರ ನಾಗಪ್ಪ ಮತ್ತು ಸಹೋದರರು ಮತ್ತು ಮಕ್ಕಳು, ಸೊಸೆಯಂದಿರು.
✤ಮಿಟ್ಲಕಟ್ಟೆ ನೀಲಪ್ಪ, ಹನುಮಂತಪ್ಪ, ಮತ್ತು ಮಕ್ಕಳು, ಅಳಿಯಂದಿರು.
✤ಮಿಟ್ಲಕಟ್ಟೆ ಚಂದ್ರಪ್ಪ ಮತ್ತು ಸಹೋದರರು, ಕುಂದುವಾಡ.
✤ಭೂತಜ್ಜಿಯವರ ಕೆ.ಎಸ್. ಹನುಮಂತಪ್ಪ ಮತ್ತು ಸಹೋದರರು, ಮಕ್ಕಳು ಹಾಗೂ ಕನಗನಹಳ್ಳಿ ವಂಶಸ್ಥರು
✤ಜೆ.ಎನ್. ವಿರೂಪಾಕ್ಷಪ್ಪ ಮತ್ತು ಸಹೋದರರು ಮತ್ತು ಮಕ್ಕಳು,
✤ಕೆ.ಜಿ ಪ್ರಕಾಶ್ ಮತ್ತು ಮಕ್ಕಳು, ಸಿ.ರಾಜು ಮತ್ತು ಸಹೋದರರು, ಚಿಕ್ಕೂಲಿಕೆರೆ.
✤ಶ್ರೀಮತಿ ಶಾರದಮ್ಮ ಪ್ರಕಾಶ್ ಹಾಗೂ ಸಹೋದರರು ಬಿಸಲೇರಿ
✤ಶ್ರೀಮತಿ ಪುಷ್ಪ ಮಹಾದೇವಪ್ಪ, ಖಂಡೇರಾಯನಹಳ್ಳಿ.
ಪೂಜಾರ್ ಗುರುಸಿದ್ದಪ್ಪ ಮತ್ತು ಮಕ್ಕಳು, ಸಂತೇಬೆನ್ನೂರು, ಹಾಗೂ ಹಳೇಕುಂದುವಾಡ ಗ್ರಾಮದ ಹಿತೈಷಿಗಳು.

ಮೊ : 63638 99828, 63601 93989



# SCIENCE ACADEMY (R.)

(A UNIQUE CENTRE FOR P.U. CLASSES)
# 307 / 2B, I FLOOR, 2ND MAIN, P.J. EXTN
NEAR STADIUM, DAVANGERE – 4

**ADMISSION STARTED FOR**
II PUC (PCMB) SUMMER CLASSES
Classes starts from 9th March 2023 &
**CET–NEET CRASH COURSE**
Classes starts from 27th March 2023 &
SSLC (10th) CBSE/STATE SUMMER CLASSES
Classes starts from 3rd April 2023

- Subject Experts will engage the classes.
- Only Few Seats are Available, Join early.

*For more Details contact:*
Office: 08192 – 457761, Mobi.: 9980368779 9448178087
"We don't have any other branches in Davangere in the name of Academy".



ssims SPARSH ORTHOPAEDICS • PLASTIC • NEUROSCIENCES CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 9ನೇ ಮಾರ್ಚ್ 2023 । ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥ ॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

# ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ತಾಲ್ಲೂಕು ಶ್ಯಾಮನೂರು ಗ್ರಾಮದ ವಾಸಿ
ಶ್ರೀ ಡಿ.ಇ. ದೇವೇಂದ್ರಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿ.: 27.02.2023ನೇ ಸೋಮವಾರ ಬೆಳಿಗ್ಗೆ: 9.50 ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಶ್ರೀ ಡಿ.ಕೆ. ಈಶ್ವರಪ್ಪನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 07.03.2023ನೇ ಮಂಗಳವಾರ ಬೆಳಿಗ್ಗೆ 10.30 ಕ್ಕೆ ದಾವಣಗೆರೆ ತಾ,
ಶ್ಯಾಮನೂರಿನ ಶಿವಪಾರ್ವತಿ ಬಡಾವಣೆಯಲ್ಲಿ
ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀ. ಡಿ.ಇ ದೇವೇಂದ್ರಪ್ಪ ಮತ್ತು ಮಕ್ಕಳು, ಶ್ರೀ ಕೆ. ಯತಿರಾಜು ಮತ್ತು ಮಕ್ಕಳು
ಶ್ರೀಮತಿ ನಳಿನ ಶ್ರೀ ಜಗದೀಶ್ ಮತ್ತು ಮಕ್ಕಳು, ಶ್ಯಾಮನೂರು
ದೊಡ್ಡವೀರಪ್ಪರ ವಂಶಸ್ಥರು, ಕಲ್ಲವ್ವನಾಗ್ತಿಹಳ್ಳಿ. ಊರಮಂದ್ಲರ ವಂಶಸ್ಥರು
ಅಳಿಯಂದಿರು ಮತ್ತು ಮಕ್ಕಳು, ಅಣಬೇರು.

ಇಂದ : **ಶ್ರೀನಿಧಿ ಸೀಡ್ಸ್ ಸೆಂಟರ್, ಮಹಾವೀರ ರಸ್ತೆ, ದಾವಣಗೆರೆ.**
ಮೊ : 94485 88807, 76760 51555

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಲು ಕೋರಿದೆ.






ದಾವಣಗೆರೆ
ಮಹಾನಗರ ಪಾಲಿಕೆ
ಸದಸ್ಯರಾದ

**ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

**ಜಿ.ಎಸ್. ಮಂಜುನಾಥ ಗಡಿಗುಡಾಳ್**
ವಿರೋಧ ಪಕ್ಷದ ನಾಯಕರು ಹಾಗೂ
ಸದಸ್ಯರು, 38ನೇ ವಾರ್ಡ್,
ದಾವಣಗೆರೆ ಮಹಾನಗರ ಪಾಲಿಕೆ.



ದಾವಣಗೆರೆ ಮಹಾನಗರ ಪಾಲಿಕೆಯ ಸಮಸ್ತ ಕಾಂಗ್ರೆಸ್ ಸದಸ್ಯರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte